

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

Volume : 06 Issue : 312 Friday 23-08-2024 E-mail : maruti.b.hosamani76@gmail.com Page: 4 Price : Rs. 1/-


## ಕಲಾ ಭಾರತಿ ಕಲಾ ಸಂಘ ಹಿರೇ ಹೆಗ್ಡಾಳ್ ವತಿಯಿಂದ ನಾಲ್ಕನೇ ವರ್ಷದ ಸಾಂಸ್ಕೃತಿಕ ಕಲೋತ್ಸವ


**ಹಿರೇ ಹೆಗ್ಡಾಳ್ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹಿರೇ ಹೆಗ್ಡಾಳ್ ಗ್ರಾಮದ ಕಲಾ ಭಾರತಿ ಕಲಾ ಸಂಘ (ರಿ) ಸಂಸ್ಥಾಪಕರು ಕಾರ್ಯಕ್ರಮದ ಆಯೋಜಕರು ಬಣಕಾರ್ ಮೂಗಪ್ಪ ಹಿರೆ ಹೆಗ್ಡಾಳ್ ಇವರ ವತಿಯಿಂದ ನಾಲ್ಕನೇ ಸಾಂಸ್ಕೃತಿಕ ಕಲೋತ್ಸವ ಕಾರ್ಯಕ್ರಮ ಜರುಗಲಿದ್ದು. ಪ್ರತಿ ವರ್ಷದಂತೆ ಈ ವರ್ಷವೂ ದಿನಾಂಕ 25.08.2024ರ ಭಾನುವಾರ ಬೆಳಿಗ್ಗೆ 9:30ಕ್ಕೆ ಬಳ್ಳಾರಿ ಜಿಲ್ಲಾ ಸಂಡೂರು ಪಟ್ಟಣದ ಗುರು ಭವನದಲ್ಲಿ ಹೊಸಪೇಟೆ ರಸ್ತೆ ಸಂಡೂರು ಕಾರ್ಯಕ್ರಮ ಜರುಗಲಿದ್ದು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ಡಾ, ಕಾಲಜ್ಞಾನ ಬ್ರಹ್ಮ ಸದ್ಗುರು ವಿಶ್ವಕಾಲ ಜ್ಞಾನ ಶಿವಯೋಗಿ ಶರಣಬಸವ ಮಹಾ ಸ್ವಾಮಿಗಳು ತಳ್ಳಿಯಾಳ ಸಂಸ್ಥಾನ ಕೋಡಿಮಠ ಗಜೇಂದ್ರಗಡ ಹಾಗೂ ಪೂಜ್ಯ ಶ್ರೀ ಮ ನಿ ಪ್ರಭು ಮಹಾ ಸ್ವಾಮಿಗಳು ಸಂಸ್ಥಾನ ವಿರಕ್ತಮಠ ಸಂಡೂರು ಅಧ್ಯಕ್ಷತೆ ಮಂಜುನಾಥ



ಹಿರೇಮಠ ಅಧ್ಯಕ್ಷರು ವೀರಶೈವ ಮಹಾಸಭಾ ಅಧ್ಯಕ್ಷರು ತಾಲೂಕಾ ಘಟಕ ಸಂಡೂರು ಹಾಗೂ ಉಪನ್ಯಾಸಕರಾಗಿ ಶ್ರೀ ವಿವೇಕಾನಂದ ಸ್ವಾಮಿ ಪದವಿ ಪೂರ್ವ ಕಾಲೇಜ್ ಉಪನ್ಯಾಸಕರು ಕೂಡ್ಲಿಗಿ ಈ ಕಾರ್ಯಕ್ರಮ ಸರ್ವ ಧರ್ಮಿಯ ಕಾರ್ಯಕ್ರಮವಾಗಿದ್ದು. ಎಂದು ಸಂಘದ ಅಧ್ಯಕ್ಷರಾದ ಬಣಕಾರ್ ಮೂಗಪ್ಪ ಇವರು ಮಾತನಾಡಿದರು ಕರ್ನಾಟಕದ ನಾಡಿನ ಹರಾಗುರು ಶರಣರ ಆಶೀರ್ವಾದ ದೊಂದಿಗೆ ಈ ಕಾರ್ಯಕ್ರಮ ಜರುಗಲಿದ್ದು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ 110 ಸಾಧಕರಿಗೆ ಪ್ರಶಸ್ತಿ ಸಮಾರಂಭ ಕಾರ್ಯಕ್ರಮ ಕೊಟ್ಟೂರಿನಲ್ಲಿ ಉದ್ಘಾಟನೆ ಗೊಂಡ ಕಾರ್ಯಕ್ರಮ ಈಗ ಸಂಡೂರಿನ ವರೆಗೂ ಈ ಒಂದು ಸಂಘ ನಾಲ್ಕನೇ ವರ್ಷದ ಸಂಸ್ಕೃತಿಕ ಕಲೋತ್ಸವ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಜರುಗಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸೋ ದಾ ವಿರೂಪಾಕ್ಷ ಗೌಡ್ರು ಉಮಾ ಮಹೇಶ್ವರ ವಿ ಟಿ ಪ್ರಕಾಶ್ ಶಿವಪ್ರಕಾಶ್ ಯಶ್ವಂತ್ ನಗರ ಮಂಜುನಾಥ ಕೆಎಂ ಪ್ರಕಾಶ್ ಶರಣಯ್ಯ ಲಕ್ಷ್ಮೀಪುರ ಜಿ ಬೋರಣ್ಣ ಕೂಡ್ಲಿಗಿ ಇತರರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## "ಓಂ ಶ್ರೀ ಗುರು ರಾಘವೇಂದ್ರ ರಾಯರು ಕಲಿಯುಗ ಕಾಮಧೇನು" ನೆನೆವ ಮನ ಪಾವನ



ಓಂಶ್ರೀಗುರು ರಾಘವೇಂದ್ರ ರಾಯರು ಕಲಿಯುಗ ಕಾಮಧೇನು"

ಶ್ರೀ–ಶ್ರೀಕರ ನಿತ್ಯ ಶುಭಕರ ಶಂಕುಕರ್ಣ ಅವತಾರಿ ಶ್ರೀ ಪ್ರಹ್ಲಾದರಾಜರು ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಗು– ಗುರುವಾರ ಬೃಂದಾವನ ಭಾಗ್ಯ ಗುರುರಾಜ ರಾಯರ ರಾಯ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ರು––ರುಜುವಾತು ನಿತ್ಯ ಸತ್ಯ ರಾಘವೇಂದ್ರ ಸ್ವಾಮಿ ದರ್ಶನ ಭಾಗ್ಯ ಅನುದಿನ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ರಾ–ರಾಮೋವಿಜಯತೇ ಜಯದ ಹಾದಿಯಲಿ ನಡೆಸುವ ಶ್ರೀಹರಿ ಅವತಾರಿ ಪ್ರಹ್ಲಾದರಾಜರು ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಘ–ಘನಶ್ರೀಸುಧೀಂದ್ರವರಪುತ್ರ ಓಂ ಶ್ರೀ ಗುರು ರಾಜರಾಘವೇಂದ್ರಾಯ ನಮಃ

ವೇ–ವೇಷಭೂಷಣ ಸಂಗೀತ ವೀಣಾ ಪಾಣಿ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ರಾ–ರಾಘವ ಮಾಧವ ಗುರುರಾಜ ಓಂ ಶ್ರೀ ರಾಘವೇಂದ್ರಾಯ ನಮಃ

ಯ–ಯತಿಕುಲತಿಲಕಾಯ ಯದ್ವೀಶ ಯತಿರಾಜ್ ಗುರುಭ್ಯೋ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ರು– ರುಚಿಕರ ಪರಿಮಳ ವರಪ್ರಸಾದ ಯೋಗೇಂದ್ರ ಗುರುವೇದಯಾನಿಧಿ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಕ–ಕರಮುಗಿದ ಭಕ್ತರು ಪಾವನ ಭಕ್ತವತ್ಸಲಾಯ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಕರಗದ ಕಲರವ ವೀಣಾ ನೀನಾದ ಸುನಾದ ತನುಮನಕೆ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಲಿ–ಲಿಲಾಧರ ನಿತ್ಯ ನಿರಂತರ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಯು–ಯುಗ ಯುಗದಿ ಪವಾಡ ನಿಜ ಸಾಕ್ಷಿ ಸಂತೃಪ್ತ ಭಕ್ತವೃಂದ ಓಂ ಶ್ರೀ ಭಕ್ತವತ್ಸಲಾಯ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಗ–ಗಗನ ದೀಪದ ಬೆಳಕು ಸದಾ ಜನಮನದಿ ರಾಜರಾಯ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ಕಾ–ಕಾಯುವ ನಿತ್ಯ ಕಾಲಾತೀತ ಭಯ ನಿವಾರಕ ಓಂ ಶ್ರೀ ಗುರು ರಾಘವೇಂದ್ರಾಯ ನಮ:

ಮ–ಮನೋಲ್ಲಾಸಮಧುರ ಸಂಗೀತ ರೂಪ ವೀಣಾವಾದನ ವೈಭವ ಓಂ ಶ್ರೀ ಗುರು ರಾಘವೇಂದ್ರಾಯ ನಮಃ ಧೇ–ಧೇಯಾಂಶಿ ಪೂರ್ವಾರಾಧನೆ ಮಧ್ಯರಾಧನೆ ಉತ್ತರಾಧನೆ ಸಂಭ್ರಮ ಮಂತ್ರಾಕ್ಷತೆ ಓಂ ಶ್ರೀ ರಾಘವೇಂದ್ರಾಯ ನಮಃ

ಸದಾ ಸ್ಮರಿಸುವ ಮನಗಳ ಪಾವನ ಓಂ ಶ್ರೀ ಗುರು ರಾಘವೇಂದ್ರಾಯ ನಮಃ

ನು–ನುಡಿ ನಿತ್ಯ ಸತ್ಯ ಮಂತ್ರ ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರತಾಯಚ। ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ।

ಧ್ಯಾನ ಧರ್ಮ ಪ್ರಧಾನ ನುಡಿವ ಸರ್ವ ತನುಮನ ಸದಾ ಹರಸಲಿ ಕೃಪೆ ಇರಲಿ ಅನವರತ ಓಂ ಶ್ರೀ ಗುರು ರಾಘವೇಂದ್ರರಾಯ ನಮಃ

ಕಲಿಯುಗ ಕಾಮಧೇನು ಶುಭನಾಮ ನೆನೆವ ಸದಾ ಮನದಲಿ ಕೃಪೆ ತೋರುವ ಅನವರತ ಹರಸಲಿ ಮನುಕುಲದ ಬಾಂಧವರ ವರಪ್ರದಾಯ

ಓಂ ಶ್ರೀ ಗುರು ರಾಘವೇಂದ್ರಾಯ ನಮಃ ಓಂ ಶ್ರೀಗುರು ರಾಘವೇಂದ್ರರಾಯರು ಕಲಿಯುಗ ಕಾಮಧೇನು.

**–ದೇಶಂಸು ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ ಆರೋಗ್ಯ ನಿರೀಕ್ಷಣಾಧಿಕಾರಿ ಬಾಗಲಕೋಟೆ.8618674872**

## ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ

**ಬಿಂಜಲಬಾವಿ :** ತಾಳಿಕೋಟೆ ತಾಲೂಕಿನ ಬಿಂಜಲಬಾವಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಯಲ್ಲ ಪ್ರತಿಭಾ ಕಾರಂಜಿ ಕಾರ್ಯಕ್ರಮ ಜರುಗಿ–ತು. ಪ್ರತಿಭಾ ಕಾರಂಜಿ 2024–25 ನೇ ಸಾಲಿನ ಕಲಕೇರಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಿಂಜಲಬಾವಿಯಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 25 ಕ್ಕೂ ಹೆಚ್ಚು ಶಾಲಾ ಮಕ್ಕಳು ಮುಖ್ಯ ಗುರುಗಳು ಮತ್ತು ಸಹ ಶಿಕ್ಷಕರು ಕೂಡ ಹಾಜರಿದ್ದರು, ಕಾರ್ಯಕ್ರಮದ ವೇದಿಕೆಯಲ್ಲಿ ಅಧ್ಯಕ್ಷತೆಯನ್ನು ಶ್ರೀ



ಆರ್.ಡಿ.ಪಾಟೀಲ್ ಪಿ.ಕೆ.ಪಿ.ಎಸ್ ಇವರು ವಹಿಸಿ ಕೊಂಡಿದ್ದರು, ಮುಖ್ಯ ಅತಿಥಿ ಸ್ಥಾನಗಳನ್ನು, ಶಾಲೆಗೆ ಭೂದಾನವನ್ನು ನೀಡಿದ ಶ್ರೀ ವೆಂಕಟರಾವ್ ನಾಡಗೌಡ, ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷರಾದ ಶಂಕರಗೌಡ ಜಿ ಪಾಟೀಲ್, ಶಿಕ್ಷಣ ಪ್ರೇಮಿಗಳಾದ ಶ್ರೀ ಸಿ ಜಿ.ಎಸ್ ಪಡೆಕ್ನೂರ್, ಊರಿನ ಗಣ್ಯ ವ್ಯಕ್ತಿಗಳಾದ ಶ್ರೀ ಎಸ್.ಬಿ.ಪಟ್ಟಣಶೆಟ್ಟಿ, ಕಲಕೇರಿ ವಲಯ ಶಿಕ್ಷಣ ಸಂಯೋಜ–ಕರಾದ ಶ್ರೀ ಐ.ಎಫ್.ಭಾಲ್ಕಿ, ಕಲಕೇರಿಯ ಸಿ.ಆರ್.ಪಿ ಯಾದ ಶ್ರೀ ಎಸ್.ಎಲ್. ನಾಯ್ಕೋಡಿ, ಕಲಕೇರಿಯ ಉರ್ದು ಸಿ.ಆರ್.ಪಿ ಯಾದ ಶ್ರೀ ಎ.ಐ.ಮಣೂರ್, ಸ್ಥಳೀಯ ಶಾಲೆಯ ಮುಖ್ಯ ಗುರುಗಳಾದ ಶ್ರೀ ಎಸ್.ಐ.ದೋಣಿಕರ್, ಕಲಕೇರಿ ಎಂ.ಪಿ.ಎಸ್ ಶಾಲೆಯ ಮುಖ್ಯ ಗುರುಗಳಾದ ಶ್ರೀ ಜೆ.ಬಿ ಕುಲಕರ್ಣಿ, ಡಿ.ಎನ್ ಚಿಕ್ಕಮಠ, ಹಾಗೂ ಕಲಕೇರಿ ಕ್ಲಸ್ಟರ್ನ ಎಲ್ಲಾ ಮುಖ್ಯ ಗುರುಗಳು ಸಹ ಶಿಕ್ಷಕರು ಮುದ್ದು ಮಕ್ಕಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು, ಕಾರ್ಯಕ್ರಮ ದಲ್ಲಿ ಪ್ರಾಸ್ತಾವಿಕವಾಗಿ ಶಿಕ್ಷಣ ಸಂಯೋಜಕರಾದ ಶ್ರೀ ಐ.ಎಫ್ ಭಾಲ್ಕಿ ಮಾತನಾಡಿದರು. ಕಾರ್ಯಕ್ರಮವನ್ನು ಕುರಿತು ಶ್ರೀ ಜಿ.ಎಸ್.ಪಡೆಕನೂರ ಅತ್ಯಂತ ಮಾರ್ಮಿಕವಾಗಿ ಹಾಗೂ ಇವತ್ತಿನ ಶಿಕ್ಷಣದ ಬಗ್ಗೆ ಕುರಿತು ಮಾತನಾಡಿದರು. ಶ್ರೀ ಎಸ್.ಬಿ.ಕಬ್ಬಿನ ನಿರೂಪಣೆ ಮಾಡಿದರು, ಶ್ರೀ ಎಚ್ ಎಲ್ ನಾಯ್ಕೋಡಿ ಸ್ವಾಗತಿಸಿ ವಂದಿಸಿದರು. ತದನಂತರ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅನುಗುಣವಾಗಿ ಕೋಣೆಗಳಲ್ಲಿ ಮಕ್ಕಳು ನಿಗದಿ ಪಡಿಸಿದ ಸ್ಪರ್ಧೆಗಳಲ್ಲಿ ಪಾಲ್ಗೊಂಡರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ. ಮನಗೂಳಿ.ತಾಳಿಕೋಟೆ**

## ಸರ್ಕಾರ ನಷ್ಟದಲ್ಲಿರುವ ರೈತರ ಕಣ್ಣೀರು ಒರೆಸುವ ಕೆಲಸ ಮಾಡಲಿ. ಮಾಳಿಂಗರಾಯ ಕಾರಗೊಂಡ ಸರ್ಕಾರಕ್ಕೆ ಸಲಹೆ

ಕರ್ನಾಟಕ ರಾಜ್ಯದಲ್ಲಿ ಒಂದು ಕಡೆ ಅನಾವೃಷ್ಟಿ ಒಂದು ಕಡೆ ಅತಿವೃಷ್ಟಿ ಹೀಗಾಗಿ ದಶಕಗಳಿಂದ ರೈತರು ಕಣ್ಣೀರಿನಲ್ಲಿ ಕೈ ತೊಳೆಯುವಂತಾಗಿದೆ. ರಾಜ್ಯದಲ್ಲಿ ಯಾವುದೇ ಸರ್ಕಾರ ಬಂದರೂ ರೈತರ ಜೀವನ ಮಟ್ಟ ಸುಧಾರಣೆ ಮಾಡುವ ಯೋಜನೆ ಜಾರಿಗೆ ತರದಿರುವುದು ದುರದೃಷ್ಟಕರ ಸಂಗತಿ. ದಶಕಗಳಿಂದ ರೈತರು ಬೆಳೆದ ಬೆಳೆಗೆ ನಿಗದಿತ ಬೆಂಬಲ ಬೆಲೆ ಸಿಕ್ಕಿಲ್ಲ ಹೀಗಾಗಿ ರೈತ ಆರ್ಥಿಕವಾಗಿ ಸಬಲೀಕರಣವಾಗದೆ ಸಾಲಾ ಸೂಲಾ ಮಾಡಿ ನಷ್ಟ ಅನುಭವಿಸಿ ಸಂಕಷ್ಟದಿಂದ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಂಡ ಉದಾಹರಣೆ ಸಾಕಷ್ಟಿವೆ ಆದರೆ ಆಳುವ ಸರ್ಕಾರಗಳು ಜನರಿಗೆ ಪುಕ್ಸಟ್ಟೆ ಯೋಜನೆ ಜಾರಿ ಮಾಡಿವೆ. ಆದರೆ ರೈತ ಖಾಸಗಿ ಬ್ಯಾಂಕುಗಳಲ್ಲಿ ಸರ್ಕಾರಿ ಬ್ಯಾಂಕುಗಳಲ್ಲಿ ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದಾನೆ. ರಾಜ್ಯದಲ್ಲಿ ಇದುವರೆಗೆ ರೈತ ಬೆಳೆದ ಬೆಳೆಗೆ ನಿಗದಿತ ಬೆಂಬಲ ಬೆಲೆ ಸಿಗದೇ ರೈತ ನಷ್ಟದಲ್ಲಿದ್ದಾನೆ.ಸರ್ಕಾರ ಕೊಡುವ ಈ ಪುಕ್ಸಟ್ಟೆ ಯೋಜನೆಯಿಂದ ರೈತನ ಸಾಲ ಮನ್ನಾವಾಗುವುದಿಲ್ಲ. ಈ ಪುಕ್ಸಟ್ಟೆ ಯೋಜನೆಯಿಂದ ರೈತನ ಜೀವನಮಟ್ಟ ಸುಧಾರಣೆಯಾಗುವುದಿಲ್ಲ. ಇಡೀ ದೇಶಕ್ಕೆ ಅನ್ನ ಕೊಡುವ ರೈತ ನಷ್ಟದಲ್ಲಿದ್ದರೆ. ಮುಂದೊಂದು ದಿನ. ಮಣ್ಣು ತಿನ್ನಬೇಕಾದ ಪರಿಸ್ಥಿತಿ ಬರಬಹುದು. ಆಳುವ ಸರ್ಕಾರಗಳು ರೈತನ ಕುರಿತು ದೀರ್ಘಸಮಾಲೋಚನೆ ನಡೆಸಿ.ರೈತರ ಜೀವನಮಟ್ಟ ಸುಧಾರಣೆಗೆ ಮುಂದಾಗ ಬೇಕಿದೆ. ಸರಕಾರ ಕೊಡುವ ಉಚಿತ ಯೋಜನೆಗಳಿಂದ ರೈತ ಸಬಲೀಕರಣವಾಗುವುದಿಲ್ಲ. ರೈತ ಸಬಲೀಕರಣವಾಗಬೇಕಾದರೆ.

ಆಳುವ ಸರಕಾರಗಳು ರೈತರ ಪಂಪ್ಸೆಟ್ಟುಗಳಿಗೆ ಉಚಿತ ವಿದ್ಯುತ್ ಉಚಿತ ರಸಗೊಬ್ಬರ ರೈತರಿಗೆ ಉಚಿತ ಯಂತ್ರೋಪಕರಣಗಳು ಪ್ರತಿಯೊಬ್ಬರ ರೈತರ ಜಮೀನುಗಳಿಗೆ ಕಡ್ಡಾಯವಾಗಿ ರೈತರಿಗೆ ಬೋರ್ ವೆಲ್ ಹಾಗೂ ಬಾವಿ ಕೊರೆಯಲು ಆರ್ಥಿಕ ಸಹಾಯಧನ ಯೋಜನೆ ಜಾರಿಗೆ ತರಬೇಕು.ಕೆಲವು ನಿಗಮಗಳಲ್ಲಿ ಮಾತ್ರ ಈ ಯೋಜನೆ ಜಾರಿಯಲ್ಲಿದೆ. ಆದರೆ ಈ ಯೋಜನೆ ಮಧ್ಯವರ್ತಿಗಳ ದಲ್ಲಾಳಿಗಳ ಕೆಲವು ಭ್ರಷ್ಟರ ಪಾಲಾಗುತ್ತಿದೆ. ಇದನ್ನು ತಡೆಗಟ್ಟಿ ಪ್ರತಿಯೊಬ್ಬ ರೈತರಿಗೆ ಅನುಕೂಲವಾಗುವಂತಹ ಯೋಜನೆ ಜಾರಿಗೆ ತರಬೇಕೆಂದು ರಾಜ್ಯ ಸರ್ಕಾರಕ್ಕೆ ರಾಜ್ಯ ರೈತ ಸಂಘ ಮತ್ತು ರೈತ ಸೇನೆ ತಾಲೂಕಾ ಅಧ್ಯಕ್ಷರಾದ ಮಾಳಿಂಗರಾಯ ಕಾರಗೊಂಡ ಪತ್ರಿಕಾ ಪ್ರಕಟಣೆಯ ಮೂಲಕ ಆಗ್ರಹಿಸಿದ್ದಾರೆ.

## ಕುಕನೂರು ಗ್ರಾಮದಲ್ಲಿ ವಾಂತಿ ಭೇದಿ ಪ್ರಕರಣ ಗ್ರಾಮಕ್ಕೆ ಡಾ. ಸಿದ್ದು ಪಾಟೀಲ್ ಭೇಟಿ

**ಯಡ್ರಾಮಿ :** ತಾಲೂಕಿನ ಕುಕನೂರು ಗ್ರಾಮದಲ್ಲಿ ಮೂರು ದಿನಗಳಿಂದ ವಾಂತಿಭೇದಿ ಉಂಟಾದ ಪ್ರಕರಣವು ಕಂಡುಬಂದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಡಾ. ಸಿದ್ದು ಪಾಟೀಲ್ ಭೇಟಿ ನೀಡಿ ಮಾಹಿತಿ ಪಡೆದುಕೊಂಡು ನಂತರ ಸುದ್ದಿಗಾರರೊಂದಿಗೆ ಮಾತನಾಡಿ ಗ್ರಾಮದಲ್ಲಿ ವಾಂತಿ ಭೇದಿ ಪ್ರಕರಣ ಕಂಡುಬಂದ ಹಿನ್ನೆಲೆಯಲ್ಲಿ ನೀರಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಿಕೊಡಲಾದೆ. ವಾಂತಿ ಭೇದಿ ಪ್ರಕರಣಕ್ಕೆ ನಿರ್ದಿಷ್ಟ ಕಾರಣ ತಿಳಿದು ಬಂದಿಲ್ಲ. ನಿರ್ದಿಷ್ಟ ವರದಿ ಬಂದ ನಂತರ ಗೊತ್ತಾಗಲಿದೆ. ಗ್ರಾಮದ ಭಾವಿಯ ನೀರು ಕಲಿಸಿಕೊಂಡಿರುವ ಸಂಶಯವಿದ್ದು. ಕೊಳವೆಬಾವಿ ಇತರೆ ನೀರಿನ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳಿಸಿಕೊಡಲಾಗಿದ್ದು. ಮುಂಜಾಗ್ರತ ಕ್ರಮವಾಗಿ ಬಿಸಿ ನೀರಿನ ಜೊತೆಗೆ ತಾಜಾ ಆಹಾರ ಸೇವಿಸಬೇಕೆಂದು ತಾಲೂಕ ವೈದ್ಯಾಧಿಕಾರಿ ಡಾ. ಸಿದ್ದು ಪಾಟೀಲ್ ತಿಳಿಸಿದ್ದಾರೆ. ವಾಂತಿ ಬೆದಿ ಸುರು ಆಯಿತು. ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಿದ ನಂತರ ಬಳಿಕ ಸ್ವಲ್ಪ ಗುಣಮುಖರಾಗಿದ್ದಾರೆ. ಗ್ರಾಮದಲ್ಲಿ ಗ್ರಾಮ ಪಂಚಾಯತಿಯಿಂದ ಪ್ರತಿ ಮನೆಗೆ 20 ಲೀಟರ್ ಫಿಲ್ಟರ್ ನೀರು ಸರಬರಾಜು ಮಾಡಲಾಗುತ್ತಿದೆ. ಗ್ರಾಮ ಪಂಚಾಯತಿ ವತಿಯಿಂದ. ಕುಡಿಯುವ ನೀರಿನ ಟ್ಯಾಂಕರ್ ಕ್ಲೀನ್ ಮಾಡಲಾಗಿದ್ದು. ಹಾಗೂ ಭಾವಿಗಳಲ್ಲಿ ಬ್ಲೀಚಿಂಗ್ ಪೌಡರ್ ಸಿಂಪರಣೆ ಮಾಡಲಾಗಿದೆ ಎಂದು ಸ್ಥಳೀಯ ಗ್ರಾಮಸ್ಥರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ವಿಜೃಂಭಣೆಯಿಂದ ಜರುಗಿದ ವಿಶ್ವ ಕನ್ನಡ ರಾಜ್ಯಮಟ್ಟದ ಐದನೇ ಸಾಹಿತ್ಯ ಮತ್ತು ಪರಿಸರ ಜಾಗೃತಿ ಸಮ್ಮೇಳನ



**ಕೂಡ್ಲಿಗಿ:** ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಹುಲಿಕೆರೆ ಗ್ರಾಮದ ವಿಶ್ವೇಶ್ವರ ಸಜ್ಜನ್ ಹುಲಿಕೆರೆ ಇವರ ತೋಟದಲ್ಲಿ ವಿಶ್ವ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ ವಿಶ್ವ ಕನ್ನಡ ಕಲಾ ಸಂಸ್ಥೆ ವತಿಯಿಂದ ವಿಶ್ವ ಕನ್ನಡ ರಾಜ್ಯಮಟ್ಟದ ಐದನೇ ರಾಜ್ಯ ಸಮ್ಮೇಳನ ಆಯೋಜಿಸಲಾಗಿತ್ತು ಈ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಮಾಡುವುದರ ಜೊತೆಗೆ ಈ ಕಾರ್ಯಕ್ರಮದ ಇನ್ನೊಂದು ವಿಶೇಷತೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪಡೆದವರಿಗೆ 75 ಪಂಚೆ, ಶಲ್ಯ ಹಾಗೂ 30 ಸೀರೆ, ಮುಡಿ ತುಂಬುವುದರ ಮೂಲಕ ವಿಶೇಷವಾಗಿ ಆಚರಿಸಲಾಯಿತು*ಮತ್ತು ಹಾರ ತುರಾಯಿಗೆ ತಿಲಾಂಜಲಿ ಇಟ್ಟು ಹೊಸ ನಾಂದಿ ಹಾಡಿದ್ದು ಇನ್ನೂ ವಿಶೇಷ ಹಾಗೆಯೇ ಈ ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಡಾ. ರವೀಶ ಅವರ 50 ನೇ ಹುಟ್ಟುಹಬ್ಬದ ಸರಳ ಆಚರಣೆ ಅವರ ವಿರಳ ವ್ಯಕ್ತಿತ್ವಕ್ಕೆ ಮಾದರಿಯಾಯಿತು.

ವಿಶೇಷವಾಗಿ ಪರಿಸರ ಜಾಗೃತಿ ಅಭಿಯಾನ ಮತ್ತು ರೈತ ಚಿಂತನೆಗಳ ಒಂದು ಅಭೂತಪೂರ್ವ ಕಾರ್ಯಕ್ರಮ ಜರುಗಿದ್ದು ಒಂದು ವಿಶೇಷವಾಗಿತ್ತು ಈ ಒಂದು ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳಿಂದ ಅನೇಕ ಕವಿಗಳು ಕವನ ವಾಚಕರು ಸಾಹಿತಿಗಳು ಭಾಗವಹಿಸಿದ್ದರು ಈ ಸಂದರ್ಭದಲ್ಲಿ ಕಾನ ಮಡಗಿನ ಶ್ರೀ ಐಮುಡಿ ಶರಣಾರ್ಯರು ಮಾತನಾಡಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆಗೈದ ವಿವಿಧ ಜಿಲ್ಲೆಗಳಿಂದ ಬಂದಿರುವುದು ಅದು ಕೂಡ್ಲಿಗಿ ತಾಲೂಕಿನಲ್ಲಿ ನಡೆಯುತ್ತಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದ್ದು ಅದರಲ್ಲಿ ಪರಿಸರ ಜಾಗೃತಿ ಮತ್ತು ರೈತರ ವಿಚಾರ ಸಂಕೀರ್ಣ ನಡೆಸಿದ್ದು ಇನ್ನೂ ಹೆಚ್ಚು ಅರ್ಥಗರ್ಭಿತವಾದ ಕಾರ್ಯಕ್ರಮ ಇದಾಗಿದೆ ಎಂದು ಹೇಳಿದರು ಅದೇ ರೀತಿಯಾಗಿ ಸಜ್ಜನ್ ಅವರು ಮಾತನಾಡಿ ಇತ್ತೀಚಿನ ದಿನಗಳಲ್ಲಿ ಕೃಷಿ ಕ್ಷೀಣಿಸುತ್ತಾ ಬಂದಿದ್ದು ಅವೈಜ್ಞಾನಿಕ ಕೃಷಿ ಪದ್ಧತಿಯ ಇದಕ್ಕೆಲ್ಲ ಕಾರಣ ಎಂದು ಹೇಳಿದರು ಏಕ ಬೆಳೆಯನ್ನು ಬೆಳೆಯುವುದರ ಬದಲು ಮರ ಆಧಾರಿತ ಕೃಷಿಗಳನ್ನು ಮಾಡಿ ಅನೇಕ ಆದಾಯಗಳನ್ನು ಕೂಡ ಪಡೆಯಬಹುದು ಎಂದು ಹೇಳಿದರು ಸಂಸ್ಥಾಪಕ ಅಧ್ಯಕ್ಷರಾದ ರವೀಶ್ (ಅಕ್ಕರ )ವರು ಮಾತನಾಡಿ ಇಂತಹ ಒಂದು ಪ್ರಕೃತಿಯ ಮಡಿಲಿನಲ್ಲಿ ವೈವಿಧ್ಯಮಯ ತೋಟದಲ್ಲಿ ಈ ಒಂದು ಕಾರ್ಯಕ್ರಮ ಆಯೋಜನೆ ಮಾಡಿರುವುದು ನಮಗೆಲ್ಲ ತುಂಬಾ ಖುಷಿಯಾದ ವಿಚಾರ ಎಂದು ಹೇಳಿದರು.


ಅದರಲ್ಲೂ ಕೂಡ್ಲಿಗಿ ತಾಲೂಕಿನಲ್ಲಿ ಅನೇಕ ರೀತಿಯ ಬರಹಗಾರರು ಚಿಂತಕರು ಸಾಹಿತಿಗಳನ್ನು ಹೊಂದಿರುವ ತಾಲೂಕು ಕೂಡ್ಲಿಗಿ ಎಂದು ಹೇಳಿದರು ಬರದ ನಾಡಲ್ಲೂ ಕೂಡ ಅನೇಕ ರೀತಿಯ ಹೊಸ ಹೊಸ ಹವಿಷ್ಕಾರಗಳನ್ನು ಮಾಡಿ ಕೃಷಿಯಲ್ಲಿಯೂ ಕೂಡ ಸಮೃದ್ಧಿಯಿಂದ ಬೆಳೆಯುವ ಅನೇಕ ರೈತರನ್ನು ಇಲ್ಲಿ ಕಾಣಬಹುದು ಎಂದು ಹೇಳಿದರು ಭೀಮಣ್ಣ ಗಜಪುರ ಇವರು ಮಾತನಾಡಿ ನಮ್ಮ ತಾಲೂಕು ಹಿಂದಿನಿಂದಲೂ ಕೂಡ ಅನೇಕ ಪರಂಪರೆಗಳನ್ನು ಉಳಿಸಿಕೊಂಡು ಬಂದಿದೆ ಪತ್ರಿಕಾ ರಂಗ ಎನ್ನುವುದು ಇತ್ತೀಚಿನ ದಿನಗಳಲ್ಲಿ ಪತ್ರಿಕೋದ್ಯಮ ಆಗಿ ಮಾರ್ಪಟ್ಟಾಗಿದೆ ಹಾಗೂ ಶಿಕ್ಷಣವು ಕೂಡ ಶಿಕ್ಷಣ ಉದ್ಯಮವಾಗಿ ಕಾರ್ಯನಿರ್ವಹಿಸುತ್ತಿದೆ ಪತ್ರಕರ್ತರು ಯಾವುದೇ ರೀತಿಯ ರಾಜಕೀಯ ಪ್ರಭಾವಕ್ಕೆ ಒಳಗಾಗದೆ ವಸ್ತು ನಿಷ್ಠೆಯ ವರದಿಯನ್ನು ಮಾಡುತ್ತ ಹಳ್ಳಿಗಳ ಸಮಸ್ಯೆಯನ್ನು ಸರ್ಕಾರ–ಕ್ಕೆ ಮುಟ್ಟಿಸುವುದರ ಮುಖಾಂತರ ಹಳ್ಳಿಗಳ ಸಮಸ್ಯೆಗಳನ್ನು ಬಗೆಹರಿಸಿವಂತಾಗಬೇಕು ಸಮಾಜವನ್ನು ತಿದ್ದುವ ಕೆಲಸ ನಮ್ಮದಾಗಬೇಕು ಎಂದರು ಸಮ್ಮೇಳನ ಅಧ್ಯಕ್ಷರು ಮಹೇಂದ್ರ ಕುರುಡಿ ಅವರು ಕಾರ್ಯಕ್ರಮವನ್ನು ವಿಶ್ವೇಶ್ವರ ಸಜ್ಜನ್ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಉದ್ಘಾಟಿಸಿದರು, ಎಂ ಬಸವರಾಜ್ ಕಕ್ಕುಪ್ಪಿ ರೈತ ಸಂಘ ವಿಜಯನಗರ ಜಿಲ್ಲಾ ಕಾರ್ಯಅಧ್ಯಕ್ಷರು ಮಾತನಾಡಿ ಇತ್ತೀಚಿಗೆ ಕೃಷಿ ಒಂದು ಜೂಜಾಟ ವಾಗಿದೆ ಪ್ರಕೃತಿ ಗೆ ನಾವೇನು ಕೊಡುತ್ತೀವೋ ಅದೇ ವಾಪಾಸ್ ಕೊಡುತ್ತಿದೆ ಬರ ಒಂದು ಕಡೆ ಅತಿವೃಷ್ಟಿ ಒಂದು ಕಡೆ ಅನಾವೃಷ್ಟಿ ಒಂದು ಕಡೆ ಕೃಷಿ ಮಾಡುವುದೇ ಬೇಡ ಎನ್ನುವ ಮಟ್ಟಿಗೆ ವಾತಾವರಣ ಕೂಡ ಕಾಡುತ್ತಿದೆ ಇದಕ್ಕೆಲ್ಲ ಪರಿಹಾರ ಪರಿಸರ ಉಳಿಸುವುದು ಎಂದು ಹೇಳಿದರು ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಭೀಮಣ್ಣ ಗಜಪುರ ವರದಿಗಾರರು ಸಾಹಿತಿಗಳು, ವ ವಿಶ್ವ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು ಈ ರವೀಶ್ , ಉಪನ್ಯಾಸಕರಾದ ವಸಂತ್ ಸಜ್ಜನ್,ಆರ್ ಗ್ರೂಪ್ ಸಂಸ್ಥಾಪಕ ಅಧ್ಯಕ್ಷರಾದ ಹಾಗೂ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಯು ನಾಗೇಶ್, ಕವಿಗೋಷ್ಠಿ ಅಧ್ಯಕ್ಷರಾಗಿ ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಎನ್ ಎಂ ರವಿಕುಮಾರ್, ಹೋಬಳಿ ಘಟಕದ ಅಧ್ಯಕ್ಷರಾದ ಎನ್ ಎಸ್ ತಿಪ್ಪೇಸ್ವಾಮಿ, ನಿರಂಜನ್ ಕುಮಾರ್, ನವೀನ್ ಬಿ ಸಜ್ಜನ್, ಕೆ ಸಿ ಹೊರಕೇರಪ್ಪ, ಶಂಕ್ರಣ್ಣ ಗುಬ್ಬಿ, ಡಾಕ್ಟರ್ ಸಿದ್ದಲಿಂಗಯ್ಯ ಹೊರತಾಳು,ಎಚ್ ಎಚ್ ಶಫಿ,ವಿನಾಯಕ, ದಯಾನಂದ ಸಜ್ಜನ್, ಅರವಿಂದ್ ಸಜ್ಜನ್, ವಿವೇಕ್ ಸಜ್ಜನ್, ಸಾಂಸ್ಕೃತಿ ಕಾರ್ಯಕ್ರಮಗಳಲ್ಲಿ ಅಭಿನವ ಮಹಿಳಾ ತಂಡ ಶಿವಮೊಗ್ಗ, ಶ್ರೀ ಗುರುಕೊಟ್ಟೂರೇಶ್ವರ ಭರತನಾಟ್ಯ ಕೊಟ್ಟೂರು, ಶಿವರಾತ್ರೇಶ್ವರ ಜನಪದ ಕಲಾ ನಿಕೇತನ ಕೊಟ್ಟೂರು, ವೀರಗಾಸೆ ನೃತ್ಯ, ಸವಿತಾ, ಪಾರ್ವತಮ್ಮ ಮಂಜಣ್ಣ, ಶ್ವೇತ, ಶೈಲಜಾ ಬಾಬು, ಕೆಎಂ ವೀರೇಶ್ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರು ಚಿತ್ರದುಗ–ರ್ಗ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರು, ಕವಿಗಳು, ಸಾಹಿತಿಗಳು, ಸೇರಿದಂತೆ ಇತರರು ಸಾರ್ವಜನಿಕರು ಉಪಸ್ಥಿತರಿದ್ದರು.

## ರೂಡಗಿ ಗ್ರಾಮದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಅವರ 170ನೇ ಜಯಂತೋತ್ಸವ ಆಚರಣೆ



**ಮುದ್ದೇಬಿಹಾಳ :** ನಾರಾಯಣ ಗುರು ಜಯಂತಿ ಅಂಗವಾಗಿ ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ರಾಜ್ಯ ಮಟ್ಟದ ರಸಪ್ರಶ್ನೆ ಕಾರ್ಯಕ್ರಮವನ್ನು ಅಗಸ್ಟ 20ರಂದು ಹಮ್ಮಿಕೊಳ್ಳಲಾಗಿತ್ತು. ರಸಪ್ರಶ್ನೆ ಕಾರ್ಯಕ್ರಮದಲ್ಲಿ ಸುಮಾರು 40 ತಂಡಗಳು ಸ್ಪರ್ಧೆಯಲ್ಲಿ ಭಾಗವಹಿದ್ದವು.ಆದ–ರೆ ಕಮೀಟಯು ಎಲ್ಲ ತಂಡಗಳಿಗೆ ಮೊದಲಿಗೆ ಪ್ರವೇಶ ಪರೀಕ್ಷೆ ನಡೆಸಿದರು.ಅದರಲ್ಲಿ ಒಟ್ಟು 8 ತಂಡಗಳು ಆಯ್ಕೆಯಾಗಿದ್ದವು.ಮೊದಲನೇ ಸ್ಥಾನ ಬ್ರೀಲಿಯಂಟ್ ಶಾಲೆ ಮೈಲೇಶ್ವರ, ಎರಡನೇ ಸ್ಥಾನ ಯರಝರಿ ಸ್ಕೂಲ್, 3ನೇ ಸ್ಥಾನ ಅರಸನಾಳ ಶಾಲೆ, ನಾಲ್ಕನೇ ಸ್ಥಾನ ಬ್ರೀಲಿಯಂಟ್ ಸ್ಕೂಲ್, ಮೈಲೇಶ್ವರ, ಐದನೇಯ ಸ್ಥಾನ ಬ್ರೀಲಿಯಂಟ್ ಸ್ಕೂಲ್ ಮೈಲೇಶ್ವರ ಹೀಗೆ ಐದು ಬಹುಮಾನವನ್ನು ಈ ಶಾಲೆಯ ವಿದ್ಯಾರ್ಥಿಗಳು ಪಡೆದುಕೊಂಡವು ಎಂದು ರೂಡಗಿ ಗ್ರಾಮದ ಶ್ರೀ ಬ್ರಹ್ಮಶ್ರೀ ನಾರಾಯಣ ಗುರು ಕಮೀಟಿ ತಿಳಿಸಿದರು. ಬ್ರೀಲಿಯಂಟ್ ಶಾಲೆಯ ಶಿಕ್ಷಕರು ಮಾತನಾಡಿ ಮಕ್ಕಳಿಗೆ ಈ ರೀತಿ ಸ್ಪರ್ಧೆಯನ್ನು ಏರ್ಪಡಿಸಿ ಮಕ್ಕಳಿಗೆ ಓದುವ ಹವ್ಯಾಸವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಇಂತಹ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂದು ಮಾತನಾಡಿದರು.

## ಮೇಘಾಲಯ ರಾಜ್ಯದ ರಾಜ್ಯಪಾಲ ವಿಜಯಶೆಂಕರರವರಿಗೆ ಗೌರವ ಸತ್ಕಾರ



**ಲೋಕಾಪುರ :** ಇತ್ತಿಚೆಗೆ ಮೇಘಾಲಯ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡ ನಂತರ ಪ್ರಥಮ ಬಾರಿಗೆ ಬೆಂಗಳೂರಿಗೆ ಆಗಮಿಸಿದ ವಿಜಯ ಶಂಕರ ರವರಿಗೆ ರಾಜ್ಯ ಸಹಕಾರ ಕುರಿ ಮಹಾಮಂಡಳ ಉಪಾಧ್ಯಕ್ಷ ಕಾಶೀನಾಥ ಹುಡೇದ ರವರು ಸತ್ಕರಿಸಿ ಗೌರವಿಸಿದರು.ಈಸಂದರ್ಭದಲ್ಲಿಗಡಿನಾಡಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಮಾಜಿ ಶಾಸಕರಾದ ಸೋಮಣ್ಣ ಬೇವಿನಮರದ, ಬೆಂಗಳೂರು ಮಹಾನಗರ ಪಾಲಿಕೆ ಮಾಜಿ ಮೇಯರ್ ವೆಂಕಟೇಶ್ ಮೂರ್ತಿ, ರಾಜ್ಯ ಕುರಿ ಮಹಾಮಂಡಳ ನಿರ್ದೇಶಕರಾದ ಎಂ ರಮೇಶ, ವಿಠಲ ಮಳಗಲಿ, ಸಿಂಡಿಕೇಟ್ ಸದಸ್ಯ ಸಂಗಮೇಶ ವಾಲಿಕಾರ, ಚಮನ್ ಚೌಧರಿ, ಪ್ರಕಾಶ ಮುಧೋಳ, ಅಶೋಕ ಶಿರೋರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಗ್ರಂಥಾಲವು ಜ್ಞಾನ ದೇಗಿಲವಿದಂತೆ: ಪ್ರೊ. ಸಿದ್ರಾಮ ಯರನಾಳ



**ತಿಕೋಟಾ :** ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ದಿನಾಂಕ : 13-08-2022 ಸಮಯ : ಬೆಳಿಗ್ಗೆ 10-30ಕ್ಕೆ ಸ್ಥಳ ಗ್ರಂಥಾಲಯದಲ್ಲಿ ಗ್ರಂಥಾಲಯ ವಿಭಾಗ ಮತ್ತು ಕನ್ನಡ ಸಾಂಸ್ಕೃತಿಕ ವೇದಿಕೆ, ಕನ್ನಡ ವಿಭಾಗದ ವತಿಯಿಂದ ಕನ್ನಡ ಪುಸ್ತಕ ಪ್ರದರ್ಶನ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಚಾರ್ಯರ್, ಹಾಗೂ ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಪ್ರೊ ಸಿದ್ರಾಮ ಯರನಾಳ ಆಗಮಿಸಿ ರಿಬ್ಬಣ ಕಟ್ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಪುಸ್ತಕ ಪ್ರದರ್ಶನ ದಿಂದ ವಿದ್ಯಾಥಿಗಳಿಗೆ ಓದಲು ಆಸಕ್ತಿ ಮೂಡಿಸುತ್ತದೆ. ವಿದ್ಯಾರ್ಥಿಗಳಲ್ಲಿ ಧೈರ್ಯ ಮತ್ತು ಭರವಸೆಯೊಂದಿಗೆ ಕಠಿಣ ಕೆಲಸವನ್ನು ಮಾಡಲು ಪ್ರೇರೇಪಿಸುವವು ಅಲ್ಲದೆ ಅನುಬವವನ್ನು ಉತ್ಕೃಷ್ಟಗೊಳಿಸುತ್ತವೆ. ಅವರ ಬುದ್ಧಿ ಶಕ್ತಿಯನ್ನು ತೀಕ್ಷಣಗೊಳಿಸುತ್ತದೆ.

ಕಲೆ ಸಾಹಿತ್ಯ ಸಂಗೀತ, ನಾಟಕ,ಕಾದಂಬರಿ ಜಾನಪದ ವಿಮರ್ಶ,ಸಂಶೋಧನೆ, ಹಸ್ತಪ್ರತಿಗಳಂತ ಹಲವಾರು ಸಾಹಿತ್ಯದ ಅಭಿರುಚ್ಚಿ ಬೆಳೆಯುತ್ತದೆ, ಒಂದು ಪುಸ್ತಕ ಓದುವುದರಿಂದ ನೂರು ಗೆಳೆಯರಿಗೆ ಸಮವಾಗುತ್ತದೆ. ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ರೂಪಗೊಳ್ಳಲು ಗ್ರಂಥಾಲಯದ ಪುಸ್ತಕಗಳು ಸಹಕಾರಿ ಎಂದು ಹೇಳಿದರು.

ಪ್ರಾಚಾರ್ಯ ಆರ್.ಬಿ ಸಿರಸಂಗಿ ಮಾತನಾಡಿದರು. ಡಾ ಬಸವರಾಜ ಸಲವಾಡಗಿ ಪ್ರಾಸವಿಕ ನುಡಿಗಳನ್ನಾಡಿದರು. ಮಹಾವಿದ್ಯಾಲಯದ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳದರು.

# ಚಿಮ್ಮಡದಲ್ಲಿ ಸಂಭ್ರಮದ 78ನೇ ಸ್ವಾತಂತ್ರ್ಯ ದಿನಾಚರಣೆ





**ಚಿಮ್ಮಡ :** ಗ್ರಾಮದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಡಗರ ಸಂಭ್ರಮದೊಂದಿಗೆ ಅಧ್ದೂರಿಯಿಂದ ಆಚರಿಸಲಾಯಿತು.

ಗ್ರಾಮದ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಕವಾಯತು, ಪ್ರಭಾತ್ ಫೇರಿ, ಸೈನಿಕರು ಹಾಗೂ ಸಾಧಕರ ಸನ್ಮಾನ, ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯಿತು.

ಸ್ಥಳಿಯ ಗ್ರಾಮ ಪಂಚಾಯತಿ ಆವರಣದಲ್ಲಿ ನಡೆದ ಧ್ವಜಾರೊಹಣವನ್ನು ಗ್ರಾಮ ಪಂಚಾಯತಿ ಅಧ್ಯಕ್ಷೆ ಮಾಲಾ ಅಶೋಕ ಮೋಟಗಿ ನೆರವೇರಿಸಿದರು. ಉಪಾಧ್ಯಕ್ಷೆ ಪ್ರೇಮಾ ಪರಪ್ಪಾ ಗೋವಿಂದಗೋಳ, ಮಾಜಿ ಅಧ್ಯಕ್ಷರಾದ ಆನಂದ ಕವಟಗೋಪ್ಪ, ಗುರಲಿಂಗಪ್ಪಾ ಪೂಜಾರಿ, ಪ್ರಭು ನೇಸೂರ, ಪ್ರಕಾಶ ಪಾಟೀಲ, ತಾ.ಪಂ. ಮಾಜಿ ಉಪಾಧ್ಯಕ್ಷ ಪ್ರಭು ಮುಧೋಳ, ಮಹಾಲಿಂಗ ಮಾಯಣ್ಣವರ, ಮನೋಜ ಹಟ್ಟಿ ಸೇರಿದಂತೆ ಗ್ರಾ.ಪಂ. ಸದಸ್ಯರು ಹಲವಾರು ಜನ ಪ್ರಮುಖರು ಆಗಮಿಸಿದ್ದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್‌ನ ಆವರಣದಲ್ಲಿ ನಡೆದ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯದ್ಯಕ್ಷರಾದ ಹಣಮಂತ ನೇಸೂರ ನೆರವೇರಿಸಿದರು. ಮಾಜಿ ಅಧ್ಯಕ್ಷರಾದ ಶಂಕರ ಬಟಕುರ್ಕಿ ನಿರ್ದೇಶಕರಾದ ನಿಂಗಣ್ಣ ಪೂಜಾರಿ, ರಾಮಪ್ಪ ಜಗದಾಳ, ಚನ್ನಪ್ಪ ಬಿಳ್ಳೂರ, ಸೇರಿದಂತೆ ಹಲವಾರು ಜನ ರೈತಪ್ರಮುಖರು ಆಗಮಿಸಿದ್ದರು.

ಸರಕಾರಿ ಪ್ರೌಢಶಾಲೆಯಲ್ಲಿ ನಡೆದ ಧ್ವಜಾರೋಹಣವನ್ನು ಮುಖ್ಯೋಪಾದ್ಯಾಯೆ ಎಂ.ಎಸ್. ಜಿಟ್ಟಿ ನಡೆಸಿದರು. ಎಸ್‌ಡಿಎಂಸಿ ಅಧ್ಯಕ್ಷ ಮಾರುತಿ ಮಮದಾಪೂರ ಇದ್ದರು. ಸರಕಾರಿ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಪ್ರಭಾರ ಪ್ರಾಚಾರ್ಯ ಬಿ.ಬಿ. ಕುದರಿಮನಿ ಧ್ವಜಾರೋಹಣ ನಡೆಸಿದರು ಸಮೀತಿಯ ಅಧ್ಯಕ್ಷ ಬಸವರಾಜ ಕುಂಚನೂರ, ಉಪನ್ಯಾಸಕ ಎಚ್.ಎಂ. ಕುಂಬಾರ ಇದ್ದರು. ಪಿ.ಪಿ.ಮಾಳಿಗಡ್ಡಿ ಮಠದ ಹಿ.ಪ್ರಾ ಶಾಲೆಯಲ್ಲಿ ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳ ಸಾನಿಧ್ಯದಲ್ಲಿ ನಡೆದ ಧ್ವಜಾರೋಹಣವನ್ನು ಯೋಧ ಗಂಗಾಧರ ನಾವಿಯವರಿಂದ ನೆರವೇರಿಸಲಾಯಿತು. ರಾಮಣ್ಣ ಮುಗಳಖೋಡ, ಬಾಳಪ್ಪಾ ಹಳಿಂಗಳಿ, ಮುಂಡಲಿಕಪ್ಪಾ ಪೂಜಾರಿ, ರಾಮಪ್ಪ ಬಗನಾಳ, ಪರಪ್ಪಾ ಪಾಲಭಾವಿ ಉಪಸ್ಥಿತರಿದ್ದರು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಅಡಿವೆಪ್ಪ ಪರೀಟ, ಸರಕಾರಿ ಹೆಣ್ಣು ಮಕ್ಕಳ ಮಾದರಿ ಹಿ.ಪ್ರಾ. ಶಾಲೆಯಲ್ಲಿ ಹಿರೀಯ ಶಿಕ್ಷಕಿ ಪಿ.ಕೆ. ಮಳಲಿ, ಸರಕಾರಿ ಉರ್ದು ಪ್ರಾಥಮಿಕ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಗ್ರಾಂ.ಪಂ ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ ನೆರವೇರಿಸಿದರು, ಗ್ರಾಮ ಚಾವಡಿಯಲ್ಲಿ ಗ್ರಾಮ ಆಡಳಿತ ಅಧಿಕಾರಿ ಮಂಜುನಾಥ ನೀಲನ್ನವರ ನೆರವೇರಿಸಿದರು,

ಅಲ್ಲದೇ ಓಂ.ಪ್ರಭುಲಿಂಗ ಆಯ್.ಟಿ.ಆಯ್. ಕಾಲೇಜು, ಭೂಮಿಕಾ ಸಮೂಹ ಸಂಸ್ಥೆಯ ಪ್ರೌಢಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ, ಶ್ರೀ ಬನಶಂಕರಿ ವಿದ್ಯುತ ಮಗ್ಗಗಳ ಸಹಕಾರಿ ಸಂಘ, ಪಶು ಚಿಕಿತ್ಸಾಲಯ, ಪ್ರಭುಲಿಂಗೇಶ್ವರ ಸಹಕಾರಿ ಬ್ಯಾಂಕ, ವಿಶ್ವಭಾರತಿ ಪ್ರಾಥಮಿಕ ಶಾಲೆ, ಗುರುಪ್ರಿಯಾ ವಿವಿಧೋದ್ದೆಶಗಳ ಸೌಹಾರ್ದ ಬ್ಯಾಂಕ,

ಗಜಾನನ ನೇಕಾರರ ಸಹಕಾರಿ ಸಂಘ, ಗರೀಬಿ ಹಟಾವೋ ಸಹಕಾರಿ ಸಂಘ, ಬಸವೇಶ್ವರ ಯುವಕ ಸಂಘ, ನವಜ್ಯೋತಿ ವಿವಿದೋದ್ದೆಶಗಳ ಸೌಹಾರ್ದ ಬ್ಯಾಂಕ, ಸದ್ಗುರುನಾಥ ಸಹಕಾರಿ ಬ್ಯಾಂಕ ಸೇರಿದಂತೆ ಇನ್ನೂ ಹಲವಾರು ಸಂಸ್ಥೆ, ವಿದ್ಯಾಕೇಂದ್ರಗಳಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಹಲವಾರು ಜನ ಪ್ರಮುಖರು ದೇಶಪ್ರೇಮಿಗಳು ಭಾಗವಹಿಸಿದ್ದರು.

# ಕಡಪಟ್ಟಿ ಗ್ರಾ.ಪಂ.ಗೆ ನೂತನ ಅಧ್ಯಕ್ಷರಾಗಿ ಪಾರ್ವತಿ ಆಯ್ಕೆ



**ಜಮಖಂಡಿ :** ತಾಲೂಕಿನ ಕಡಪಟ್ಟಿ ಗ್ರಾಮ ಪಂಚಾಯತ ನೂತನ ಅಧ್ಯಕ್ಷರಾಗಿ ಪಾರ್ವತಿ ಮಹಾದೇವ ಇಟ್ಟಿ ಅವಿರೋಧವಾಗಿ ಮಂಗಳವಾರ ಆಯ್ಕೆಗೊಂಡರು.

ಇದೇ ಸಂದರ್ಭದಲ್ಲಿ ಶಾಸಕ ಜಗದೀಶ ಗುಡಗುಂಟಿ, ಮಾಜಿ ವಿಪ ಸದಸ್ಯ ಜಿ.ಎಸ್.ನ್ಯಾಮಗೌಡ, ಯೋಗಪ್ಪ ಸವದಿ, ಮಹಾದೇವ ಇಟ್ಟಿ, ಶ್ರೀಶೈಲ ಪಾಟೀಲ, ಗುರುಪಾದ ಚಿನ್ನಾಮಲ್ಲ, ಮಹಾನಿಂಗ ತಳವಾರ, ಪರಶುರಾಮ ಬಿಸನಾಳ ಸಹಿತ ಹಲವರು ಇದ್ದರು.

# ಬಡ್ತಿ ಪಡೆದ ಪಿಎಸ್.ಐ ಮುರನಾಳಗೆ ಸಮೀತಿ ಸನ್ಮಾನ

**ಜಮಖಂಡಿ :** ಪೊಲೀಸ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಬಹಳಷ್ಟು ಮುಖ್ಯ. ಎಎಸ್‌ಐ ದಿಂದ ಪಿಎಸ್‌ಐ ವರೆಗೆ ಯಾವುದೇಕಪ್ಪುಚುಕ್ಕೆಇಲ್ಲದೆಉತ್ತಮವಾಗಿ ಕಾರ್ಯ ನಿರ್ವಹಿಸಿದ ಶಹರ ಪೊಲೀಸ ಠಾಣೆ ಎಎಸೈ ಪಿ.ಎಸ್.ಮುರನಾಳ ಪಿಎಸ್‌ಐ ಆಗಿ ಬಡ್ತಿ ಹೊಂದಿರುವದು ಅಷ್ಟು ಸುಲಭವಲ್ಲವೆಂದು ಹನುಮಾನ ಸೇವಾ ಸಮಿತಿ ಅಧ್ಯಕ್ಷ ಎಲ್.ಬಿ.ಪಾಟೀಲ ಹೇಳಿದರು.

ನಗರದ ಶಾಂತಿನಗರ ಹನುಮಾನ ಮಂದಿರದಸೇವಾಸಮೀತಿಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪೊಲೀಸ ಇಲಾಖೆಯಲ್ಲಿ ಸಮಾಧಾನ ಮತ್ತು ತಾಳ್ಮೆ ಇರಬೇಕು. ಅನೇಕ ವರ್ಷಗಳಿಂದ ಉತ್ತಮ ರೀತಿಯಲ್ಲಿ ಕೆಲಸ ಮಾಡಿ ಹೆಸರು ಮಾಡಿದ್ದಿರಿ ಮುಂದೆ ಕೂಡ ಉತ್ತಮವಾಗಿ ಕರ್ತವ್ಯ ನಿರ್ವಹಿಸಲಿ ಎಂದರು.

ಇದೇ ಸಂದರ್ಭದಲ್ಲಿ ಪೂರ್ಣಿಮಾ ವೀರಭದ್ರಯ್ಯ ಗಾರವಾಡಮಠ ಮಂಡಿಸಿದ ಅವಿಭಜಿತ ವಿಜಯಪೂರ ರೈತ ಹೋರಾಟಗಳು ಎಂಬ ಮಹಾಪ್ರಭಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿದ್ದನ್ನು ಸ್ಮರಿಸಿ ಅವರನ್ನು ಸನ್ಮಾನಿಸಿದರು. ಶಾಂತಿನಗರ ಹನುಮಾನ ಮಂದಿರದ ಸೇವಾ ಸಮೀತಿ ಹಿರಿಯರಾದ ಜಿ.ಪಿ.ಹುಣಸಿಕಟ್ಟಿ, ಎಸ್.ಪಿ.ಗಿರಡ್ಡಿ, ಬಿ.ಎಚ್.ಶೆಟ್ಟರ, ಬಿ.ಎನ.ಬೆನಕಟ್ಟಿ, ಎಚ್. ಎಂ.ಶೆಟ್ಟರ ಸಹಿತ ಹಲವರು ಇದ್ದರು.



## ರಾತ್ರಿ ವೇಳೆ ಕೃತ್ಯ: ಪುರಸಭೆ ಜಾಗದಲ್ಲಿ ರಾಯಣ್ಣ ವೃತ್ತ ನಿರ್ಮಾಣ



**ತೇರದಾಳ :** ಇಲ್ಲಿನ ಬಸ್ ನಿಲ್ದಾಣ ಬಳಿಯ ಪಿಕೆಪಿಎಸ್ ಬ್ಯಾಂಕ್ ಎದುರಗಡೆ ಇರುವ ಪುರಸಭೆ ಜಾಗದಲ್ಲಿ ಗುರುವಾರ ಮದ್ಯರಾತ್ರಿ ಸಂಗೊಳ್ಳಿ ರಾಯಣ್ಣ ವೃತ್ತ ನಿರ್ಮಾಣಗೊಳಿಸಿರುವುದು ಪಟ್ಟಣದ ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ. ಈ ಪುರಸಭೆ ಜಾಗವನ್ನು ಬೇಕಾ ಬಿಟ್ಟಿಯಾಗಿ ಕೆಲವರು ಬಳಸಿಕೊಳ್ಳುತ್ತಿದ್ದರು. ಈ ಸ್ಥಳದಲ್ಲಿ ರಾಜ್ಯ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಇಂದಿರಾ ಕ್ಯಾಂಟಿನ್ ನಿರ್ಮಿಸಬೇಕೆಂದು ಇತ್ತಿಚೆಗೆ ಕಾಂಗ್ರೆಸ್ ಮುಖಂಡರು ಪುರಸಭೆ ಸದಸ್ಯರು ನಿರ್ಧರಿಸಿದ್ದರು. ಅಲ್ಲದೆ ಜಾಗವನ್ನು ಯಾರು ಅತಿಕ್ರಮಣ ಮಾಡಬಾರದು ಎಂದು ಸ್ವಚ್ಚಗೊಳಿಸಿ ತಂತಿ ಬೇಲಿ ಹಾಕುವ ಕೆಲಸವೂ ಪ್ರಾರಂಭಗೊಂಡಿತ್ತು. ಆದರೆ ಗುರುವಾರ ಮದ್ಯರಾತ್ರಿ ದಿಢೀರನೆ ಸಂಗೊಳ್ಳಿ ರಾಯಣ್ಣ ವೃತ್ತ ನಿರ್ಮಿಸಿದ್ದು ಹುಬ್ಬೇರಿಸುವಂತೆ ಮಾಡಿದೆ. ಗಲಿಬಿಲಿ- ಬುಧವಾರ ರಾತ್ರಿ ವರೆಗೆ ಪುರಸಭೆ ಜಾಗದಲ್ಲಿ ಏನು ಇರಲಿಲ್ಲ. ಗುರುವಾರ ಧ್ವಜಾರೋಹಣ ಕಾರ್ಯಕ್ರಮಕ್ಕೆ ಎಲ್ಲರೂ ಹೋಗುತ್ತಿದ್ದಂತೆ ಸಂಗೊಳ್ಳಿ ರಾಯಣ್ಣ ವೃತ್ತ ನಿರ್ಮಾಣಗೊಂಡಿರುವುದನ್ನು ಕಂಡು ಗಲಿಬಿಲಿಗೊಂಡರು. ಪುರಸಭೆ ಹಾಗೂ ಪೊಲೀಸ್ ಅಧಿಕಾರಿಗಳಿಗೂ ಅಚ್ಚರಿ ಮೂಡಿಸಿದ್ದು, ಮುಂದೆ ಏನು ಕ್ರಮ ಕೈಗೊಳ್ಳುತ್ತಾರೆಂದು ಕಾದು ನೋಡಬೇಕಿದೆ.

# ತೇರದಾಳದಲ್ಲಿ ಸಂಭ್ರಮದ ಸ್ವಾತಂತ್ರ್ಯೋತ್ಸವ



**ತೇರದಾಳ :** ಇಲ್ಲಿನ ಟಿಎಪಿಸಿಎಂಎಸ್ ಶಾಖೆಯಲ್ಲಿ ನಿರ್ದೇಶಕ ಕಾಶಿನಾಥ ಕಾಲತಿಪ್ಪಿ, ಹೃದಯಭಾಗ ಸಿದ್ದೇಶ್ವರ ಗಲ್ಲಿಯಲ್ಲಿ ಡಾ. ಶ್ರೀಶೈಲ ಹುಬ್ಬಳ್ಳಿ, ಶ್ರೀನಿಧಿ ಬ್ಯಾಂಕ್ ಶಾಖೆಯಲ್ಲಿ ಅಧ್ಯಕ್ಷ ಮಹೇಶ ಯಾದವಾಡ, ಅಲ್ಲಮಪ್ರಭುಖಾದಿ ಭಂಡಾರದಲ್ಲಿ ಸುಭಾಸ ಗಾತಾಡೆ, ಕೆಜಿಎಸ್ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ವಿಠ್ಠಲ ಭಜಂತ್ರಿ, ಅಂಚೆ ಕಚೇರಿಯಲ್ಲಿ ಎಸ್.ಪಿ. ಚಿಂಚಖಂಡಿ, ಕಿರಾಣಿ ವರ್ತಕರ ಬ್ಯಾಂಕಿನಲ್ಲಿ ಅಧ್ಯಕ್ಷ ಉಸ್ಮಾನ ಮುಜಾವರ, ಕೆಬಿಎಂಪಿಎಸ್ ಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಮಹಾವೀರ ನಂದಗಾಂವ, ಸರಕಾರಿ ಉರ್ದು ಪ್ರೌಢಶಾಲೆಯಲ್ಲಿ ಎಸ್ಡಿಎಂಸಿ ಅಧ್ಯಕ್ಷ ಅಲ್ತಾಪ ಹನಗಂಡಿ, ಪಿಕೆಪಿಎಸ್ ಪಶ್ಚಿಮ ಭಾಗ ಬ್ಯಾಂಕಿನಲ್ಲಿ ಚೇರಮನ್ ರಮೇಶ ಕಿತ್ತೂರ, ಸರಕಾರಿ ಚಾವಡಿಯಲ್ಲಿ ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಮಂಜುನಾಥ ಬ್ಯಾಂಕಿನಲ್ಲಿ ಉಪಾಧ್ಯಕ್ಷ ಪ್ರಕಾಶ ಕುಂಬಾರ, ಶ್ರೀರಾಮ ಬ್ಯಾಂಕಿನಲ್ಲಿ ಬಾಳಿಗೇರಿ ಅಮನ್ ಬ್ಯಾಂಕಿನಲ್ಲಿ ಮೋಮಿನ, ವಿಶೇಷ ತಹಸೀಲ್ದಾರ್ ಕಚೇರಿಯಲ್ಲಿ ತಹಸೀಲ್ದಾರ್ ವಿಜಯಕುಮಾರ ಕಡಕೊಳ, ಪ್ರಭುಲಿಂಗ ಬ್ಯಾಂಕಿನಲ್ಲಿ ಅಧ್ಯಕ್ಷ ಮುತ್ತಪ್ಪ ಮುಳ್ಳಟ್ಟಿ, ಬಾಪೂಜಿ ಬ್ಯಾಂಕಿನಲ್ಲಿ ಅಲ್ಲಪ್ಪ ಮದಲಮಟ್ಟಿ, ಪಿಕೆಪಿಎಸ್ ಬ್ಯಾಂಕಿನಲ್ಲಿ ಅಧ್ಯಕ್ಷ ಜಿನ್ನಪ್ಪ ಸವದತ್ತಿ, ಶಖಾ ಗ್ರಂಥಾಲಯದಲ್ಲಿ ಕಲ್ಲೇಶ ಕುಂಬಾರ, ಪುರಸಭೆಯಲ್ಲಿ ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಉಪನೋಂದಣಿ ಕಚೇರಿಯಲ್ಲಿ ಎಸ್.ಪಿ. ಮುತ್ತಪ್ಪಗೋಳ, ಡಾ. ಪ್ರಭಾಕರ ಕೋರೆ ಬ್ಯಾಂಕಿನಲ್ಲಿ ಶಾಖಾಧ್ಯಕ್ಷ ಪರಪ್ಪ ಮದಲಮಟ್ಟಿ, ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಅಪ್ಪಣ್ಣ ಐಗಳಿ, ಸಿದ್ದೇಶ್ವರ ಶಾಲೆಯಲ್ಲಿ ಮುತ್ತಪ್ಪ ಮಿರ್ಜಿ, ಸ್ವಾಮಿ ವಿವೇಕಾನಂದ ಸಿಬಿಎಸ್‌ಇ ಶಾಲೆಯಲ್ಲಿ ಚೇರಮನ್ ಶಂಕರ ಮಂಗಸೂಳಿ, ಪ್ರಭುಲಿಂಗ ಪಪೂ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯ ವಿ.ಎಲ್. ನಾರಾಯಣ್ಕರ, ಅಂಬೇಡ್ಕರ್ ವೃತ್ತದಲ್ಲಿ ಪ್ರಜ್ಞಾ ಬಂತೇಜಿ, ಜೆವಿ ಮಂಡಳದಲ್ಲಿ ಪದ್ಮರಾಜ ಹಟ್ಟಿ, ಎಂ.ವಿ. ಪಂಚಾಕ್ಷರಿ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ನಿಂಗಯ್ಯ ಬಾಂವಿಮಠ, ನೀಲಕಂಠೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಮಲ್ಲಪ್ಪ ಜಡಿ 78ನೇ ಸ್ವಾತಂತ್ರ್ಯೋತ್ಸವದ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

# ಕಬಡ್ಡಿ ಕ್ರೀಡಾ ಪಂದ್ಯಾವಳಿ

**ಚನ್ನಮ್ಮನ ಕಿತ್ತೂರ :** ಕ್ರೀಡೆ ಮನುಷ್ಯನ ಜೀವನದಲ್ಲಿ ಉತ್ತಮವಾದುದ್ದು ಅದನ್ನು ಬೆಳೆಸಿಕೊಂಡರೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಉತ್ತಮ ಆರೋಗ್ಯದಿಂದ ಇರಬಹುದೆಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು.

ಗಜರಾಜ ಪ್ಯಾಲೇಸ್ ಹತ್ತಿರದ ಚಂದ್ರಮ್ಮ ಅಂಗಡಿ ಕಲ್ಯಾಣ ಮಂಟಪದಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜ ಕಿತ್ತೂರು ಮತ್ತು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ, ಐ,ಕ್ಯೂ,ಎ.ಸಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಬಡ್ಡಿ ಕ್ರೀಡಾ ಪಂದ್ಯಾವಳಿ ಕಾರ್ಯಕ್ರಮದ ದೀಪಬೆಳಗಿಸಿ ಮಾತನಾಡಿದವರು. ಕ್ರೀಡೆ ಎಂಬುದು ಸಂಘಟಿತ,ಸ್ಪರ್ಧಾತ್ಮಕ ಮತ್ತು ಕುಶಲತೆಯಿಂದ ಕೂಡಿದ ದೈಹಿಕ ಚಟುವಟಿಕೆಯಾಗಿದೆ. ಅಲ್ಲದೇ ಇದಕ್ಕೆ ಬದ್ಧತೆ ಮತ್ತು ನ್ಯಾಯದ ಆಟದ ಅಗತ್ಯವಿರುತ್ತದೆ. ಕ್ರೀಡೆಯಲ್ಲಿ ಸೋಲು ಮತ್ತು ಗೆಲುವು ಎರಡು ನಿರ್ಧಾರವಾಗುತ್ತವೆ. ಸೋತವರು ಧೃತಿಗೆಡಬಾರದು. ಅವರ ಪ್ರಯತ್ನವಿದ್ದರೆ ಮುಂದೊಂದು ದಿನ ಜಯ ದೊರೆಯುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ನಿವೃತ್ತ ಪ್ರೋ. ಎನ್.ಎಸ್. ಗಲಗಲಿ ಮಾತನಾಡಿ ಪ್ರತಿಯೊಂದು ಕ್ರೀಡೆಯೂ ತನ್ನದೇ ಆದ ವೈಶಿಷ್ಠ್ಯವನ್ನು ಹೊಂದಿದೆ. ಕಬಡ್ಡಿ ಆಟವು ಭಾರತೀಯ ಕ್ರೀಡೆಯಾಗಿದ್ದು ,ಅದು ಅಂತಾರಾಷ್ಟ್ರೀಯ ಮಟ್ಟದವರೆಗೂ ಬೆಳೆದಿದೆ. ಈ ಆಟವು ಯಾವುದೇ ವೆಚ್ಚವಿಲ್ಲದ ಕಡಿಮೆ ಅಂಕಣದಲ್ಲಿ ಆಡಬಹುದಾಗಿದೆ . ಈ ಆಟವು ಸ್ಪರ್ಧಿಗಳಲ್ಲಿ ಧೈರ್ಯ ಮತ್ತು ಮುನ್ನುಗ್ಗುವ ಪ್ರವೃತ್ತಿ ವೃದ್ಧಿಸುತ್ತದೆ. ಎಂದು ಹೇಳಿದರು.

ಕಬಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ಪ್ರಾಶುಂಪಾಲ ಡಾ. ಟಿ.ಬಿ. ಕೋಲಕಾರ ವಹಿಸಿಕೊಂಡಿದ್ದರು. ಕ್ರೀಡೆಯಲ್ಲಿ 30 ತಂಡಗಳು ಭಾಗವಹಿಸಿದ್ದವು.

ಈ ವೇಳೆ ಮುಖ್ಯ ಅತಿಥಿ ಮಹೇಶ ಶೆಟ್ಟರ, ಅಶಪಾಕ ಹವಾಲ್ದಾರ, ದೇವಗಾಂವ ಚಂದ್ರಗೌಡ ಪಾಟೀಲ, ಕೃಷ್ಣಾ ಬಾಳೆಕುಂದ್ರಿ, ಕಾಲೇಜಿನ ಸರ್ವ ಪ್ರಾಧ್ಯಾಪಕರು, ವಿವಿಧ ಕಾಲೇಜಿನ ತಂಡದ ವಿದ್ಯಾರ್ಥಿಗಳು, ಸಿಡಿಸಿ ಸದಸ್ಯರುಗಳು ಆಟ ವಿಕ್ಷಣೆಗೆ ಸಾರ್ವಜನಿಕರಿದ್ದರು. ನಿರೂಪಣೆ ಡಾ. ಶಿವಾಜಿ ಗೋಡಾಜಿ, ಸ್ವಾಗತ ದೈಹಿಕ ಶಿಕ್ಷಕ ನಿರ್ದೇಶಕ ಎಲ್.ಪಿ.ಬೂದನ್ನವರ ನೆರವೇರಿಸಿದರು.

# 78ನೇ ಸ್ವಾತಂತ್ರ್ಯೋತ್ಸವ-ಹರ್ ಘರ್ ತಿರಂಗಾ ಅಭಿಯಾನ ಬಾಗಲಕೋಟೆಯಲ್ಲಿ ಬಿಜೆಪಿಯಿಂದ ತಿರಂಗಾ ಯಾತ್ರೆ

**ಬಾಗಲಕೋಟೆ :** ದೆಹಲಿಯ ಕೆಂಪುಕೋಟೆ ಮೇಲೆ ಪ್ರಧಾನಿ ಮುಂದಿನ 5 ವರ್ಷಗಳ ಕಾರ್ಯಕ್ರಮದ ದಿಕ್ಸೂಚಿ ಭಾಷಣವನ್ನು ಮಾಡಲಿದ್ದು, ಸರ್ವಾಂಗಿಣ ಅಭಿವೃದ್ಧಿಯೊಂದಿಗೆ ಭಾರತ ಮತ್ತೆ ಜಗತ್ತಿಗೆ ವಿಶ್ವಗುರುವಾಗುವಲ್ಲಿ ಸಂದೇಹವಿಲ್ಲ, ಎಂದು ಮಾಜಿ ಶಾಸಕ ಬಿ.ವ್ಹಿ.ವ್ಹಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ಹೇಳಿದರು. ಅವರು ಬಾಗಲಕೋಟೆಯಲ್ಲಿ ಭಾರತೀಯ ಜನತಾ ಪಾರ್ಟಿಯ ವಿಧಾನಸಭಾ ಮತಕ್ಷೇತ್ರದಿಂದ 78ನೇ ಸ್ವಾತಂತ್ರೋತ್ಸವ ಹಾಗೂ ಹರ್ ಘರ್ ತಿರಂಗ ಅಭಿಯಾನ ಅಂಗವಾಗಿ ಹಮ್ಮಿಕೊಂಡ "ತಿರಂಗಾಯಾತ್ರೆಯಲ್ಲಿ ಭಾಗವಹಿಸಿ ಮಾತನಾಡಿದರು.




ಪ್ರಧಾನಿ ನರೇಂದ್ರ ಮೋದಿಯವರ 3ನೇ ಬಾರಿಗೆ ಪ್ರಧಾನಿಯಾದ ಮೇಲೆ ದೆಹಲಿಯ ಕೆಂಪು ಕೋಟೆಯ ಮೇಲೆ ತಿರಂಗಾ ಧ್ವಜವನ್ನು ಹಾರಿಸಿ, ಮುಂದಿನ 5 ವರ್ಷಗಳ ದಿಕ್ಸೂಚಿಯನ್ನು ಹೇಳಲಿದ್ದಾರೆ, ಕಳೆದ 10 ವರ್ಷಗಳಲ್ಲಿ ಭಾರತ ಸಾಕಷ್ಟು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿದೆ, ಪ್ರಧಾನಿ ಮೋದಿಯವರ ಪರಿಶ್ರಮದ ಫಲವಾಗಿ ದೇಶ ಸರ್ವಾಂಗಿಣ ಅಭಿವೃದ್ಧಿಯೊಂದಿಗೆ ಭಾರತ ಮತ್ತೆ ವಿಶ್ವಗುರುವಾಗುವಲ್ಲಿ ಹೆಜ್ಜೆಯನಿಟ್ಟಿದೆ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಔದ್ಯೋಗಿಕ, ತಂತ್ರಜ್ಞಾನಗಳ ಆವಿಷ್ಕಾರದೊಂದಿಗೆ ಹೋಸ ಆಧುನಿಕ ಭಾರತ ನಿರ್ಮಾಣಗೊಳ್ಳುತ್ತಿರುವುದು ಹೆಮ್ಮೆಯ ವಿಷಯ, ದೇಶದ ಯುವ ಜನತೆ ರಾಷ್ಟ್ರಭಕ್ತಿಯನ್ನುಮೈಗೂಡಿಸಿಕೊಂಡುರಾಷ್ಟ್ರ ನಿರ್ಮಾಣಕಾರ್ಯದಲ್ಲಿಕೈಜೋಡಿಸಬೇಕು, ಭಾರತ ವಿಶ್ವಗುರುವಾಗಲು ನಾವೆಲ್ಲರೂ ಶ್ರಮಿಸೋಣ ಎಂದರು.

ಬಿಜೆಪಿ ಕಾರ್ಯಕರ್ತರು ರಾಷ್ಟ್ರದ್ವಜದವನ್ನು ಕೈಯಲ್ಲಿ ಹಿಡಿದು ರಾಷ್ಟ್ರಗೋಷಣೆಗಳನ್ನು ಹಾಕುತ್ತಾ ಸಾಗಿದ್ದು ನೋಡುಗರನ್ನು ರೊಮಾಂಚನಗೊಳಿಸಿತ್ತು, ಶಿವಾನಂದ ಜೀನ್‌ನಿಂದ ಆರಂಭವಾದ ತಿರಂಗಾಯಾತ್ರೆಯ ಮೇರವಣಿಗೆ ವಲ್ಲಬಾಯಿ ಚೌಕ್, ಬಸವೇಶ್ವರ ಬ್ಯಾಂಕ್, ಟೀಕಿನಮಠ, ಪಶು ಆಸ್ಪತ್ರೆ, ಬೀಳೂರ ಅಜ್ಜನ ದೇವಸ್ಥಾನ, ಮೂಲಕ ಬಸವೇಶ್ವರವೃತ್ತದ ಬಳಿ ಜಮಾವಣೆಗೊಂಡು ಸಮಾರೋಪಗೊಂಡಿತು.

ಯಾತ್ರೆಯಲ್ಲಿಸೇನಾನಿವೃತ್ತಕ್ಯಾಪ್ಟನ್‌ಅರ್ಜುನ ಕೋರಿ, ಎಂ.ಎಸ್.ದಡ್ಡೆನ್ನವರ,,ಬಸವರಾಜ ಯಂಕಂಚಿ,ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಪ್ರಧಾನ ಕಾರ್ಯದರ್ಶಿ ಉಮೇಶ ಹಂಚಿನಾಳ, ಶ್ರೀಧರ ನಾಗರಬೇಟ್ಟ, ಲಕ್ಷ್ಮೀನಾರಾಯಣ ಕಾಸಟ್, ಸತ್ಯನಾರಾಯಣ ಹೇಮಾದ್ರಿ,ಜ್ಯೋತಿ ಭಜಂತ್ರಿ.ಬಸವರಾಜ ಅವರಾಧಿ, ರಾಜು ಶಿಂತ್ರೆ, ಪರಮೇಶ್ವರ ಮಧುರ,ಸಂಗಪ್ಪ ಸಜ್ಜನ, ಸುಜಾತ ಶಿಂಧೆ, ಶಶಿಕಲಾ ಮಜ್ಜಗಿ, ರೇಖಾ ಕಲಬುರ್ಗಿ,ನಾಗರತ್ನಾ ಹೆಬ್ಬಳ್ಳಿ, ಸ್ಮೀತಾ ಪವಾರ, ಸವೀತಾ ಲಂಕೇನ್ನವರ,ಪ್ರೇಮಾ ಅಂಬಿಗೇರ,ಯಲ್ಲಪ್ಪ ನಾರಾಯಣಿ.ಈರಪ್ಪ ಶಿರಗನ್ನವರ,ಚೆನ್ನಯ್ಯ ಹಿರೇಮಠ,ಶೀವು ಜಾಲಗಾರಸೇರಿಂದಂತೆನಗರಸಭೆಸದಸ್ಯರು, ಯುವಮೋರ್ಚಾ ಪಧಾಧಿಕಾರಿಗಳು ಭಾಗವಹಿಸಿದ್ದರು.

# ಪರಿಸರ ಜಾಗೃತಿ ಕಾರ್ಯಕ್ರಮ



**ನವಲಗುಂದ :** ನವಲಗುಂದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇಂಗಳಹಳ್ಳಿ ಗ್ರಾಮದ ಮೃತ್ಯುಂಜಯ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಟ್ರಸ್ಟ್ ನಿಂದ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಹಾಗೂ ಸಸಿಗಳ ನಾಟಿ ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಯೋಜನಾಧಿಕಾರಿ ಜಯಂತ.ಕೆ ಉದ್ಘಾಟಿಸಿ ಗ್ರಾಮಾಭಿವೃದ್ಧಿ ಯೋಜನೆಯ ಹಲವಾರು ಕಾರ್ಯಕ್ರಮಗಳ ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿ ಎಚ್ ಎಫ್ ಮೂಡಿಯಣ್ಣನವರ ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ , ಪರಿಸರ ಕಾಳಜಿ ಕುರಿತು ಉಪನ್ಯಾಸ ನೀಡಿದರು. ಆರ್ ಎಂ ಕ್ಯಾಮನಗೌಡ್ರ ಅಧ್ಯಕ್ಷತೆ ವಹಿಸಿದ್ದರು.

ಇದೆ ವೇಳೆ ವಿವಿಧ ಸ್ಪರ್ಧೆಯಲ್ಲಿ ಭಾಗವಹಿಸಿದ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಶಾಲಾ ವಿದ್ಯಾರ್ಥಿಗಳು ಪರಿಸರ ಗೀತೆಯ ಹಾಡುವ ಮೂಲಕ ಪ್ರಜ್ಞೆ ಮೂಡಿಸಿದರು. ನಂತರ ಶಾಲಾ ಆವರಣದಲ್ಲಿ ಗಣ್ಯರಿಂದ ಹಾಗೂ ಶಾಲಾ ವಿದ್ಯಾರ್ಥಿಗಳಿಂದ ಸಸಿ ನಡೆಸಲಾಯಿತು

ಸಂಸ್ಥೆಯ ಕೃಷಿ ಮೇಲ್ವಿಚಾರಕ ರವಿ ಪತ್ತಾರ ಶಾಲಾ ಸಮಿತಿಯ ಸದಸ್ಯ ಶಾಂತಪ್ಪ ಹಾಗೂ ಶಾಲೆಯ ಶಿಕ್ಷಕ ವೃಂದ,ಶಾಲಾ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಲ್ಪಾ ಕುರಹಟ್ಟಿ ನಿರೂಪಿಸಿದರು. ಕಾವ್ಯ ನಲವಡಿ ವಂದಿಸಿದರು.

# ಅವಿರೋಧ ಆಯ್ಕೆ

**ಲಕ್ಷ್ಮೇಶ್ವರ :** ತಾಲೂಕಿನ ಗೋನಾಳ ಗ್ರಾಮ ಪಂಚಾಯತಿಯ ಬಾಕಿ ಉಳಿದ ಅವಧಿಗಾಗಿ ನೂತನ ಅಧ್ಯಕ್ಷರಾಗಿ ಪಂಚಾಯಿತಿ ವ್ಯಾಪ್ತಿಯ ಗುಲಗಂಜಿ ಕೊಪ್ಪ ಗ್ರಾಮದ ಅಣ್ಣಪ್ಪ ರಾಮಗೇರಿ ನಿನ್ನೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮ ಪಂಚಾಯಿತಿಯ ಕಾರ್ಯಾಲಯದಲ್ಲಿ ಅಧ್ಯಕ್ಷರ ಚುನಾವಣೆಗೆ ಅಣ್ಣಪ್ಪ ರಾಮಗೇರಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾ ಅಧಿಕಾರಿಯು ಆಗಿದ್ದ ತಾಲೂಕ ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ ಅವರು ನಾಮಪತ್ರ ಪರಿಶೀಲಿಸಿ ಕ್ರಮಬದ್ಧವಾಗಿದ್ದರಿಂದ ಅಣ್ಣಪ್ಪ ರಾಮಗೇರಿ ಅವರನ್ನು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ಈ ಮುಂಚೆ ಅಧ್ಯಕ್ಷರಾಗಿದ್ದ ಮಂಜನಗೌಡ ಕೆಂಚನಗೌಡ ರಾಜೀನಾಮೆಯಿಂದ ಈ ಸ್ಥಾನ ತೆರವಾಗಿತ್ತು ಒಟ್ಟು ಎಂಟು ಸದಸ್ಯರ ಪಂಚಾಯಿತಿಯಲ್ಲಿ ಆರು ಜನ ಸದಸ್ಯರು ಹಾಜರಿದ್ದರು.

ಸಹಾಯಕ ಚುನಾವಣಾ ಅಧಿಕಾರಿಯಾಗಿ ಬಿಬಿ ತಳವಾರ್ ಕಾರ್ಯನಿರ್ವಹಿಸಿದರು ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜಗದೀಶ ಕುರುಬರ ಕಾರ್ಯದರ್ಶಿ ಕೊಟ್ರಗೌಡ ಪಾಟೀಲ್ ಶಿವರಾಜಸೊರಟೂರ ಮತ್ತು ಸಿಬ್ಬಂದಿ ವರ್ಗದವರು ಹಾಗೂ ಗ್ರಾಮದ ಹಿರಿಯರಾದ ಭರಮಣ್ಣ ರೊಟ್ಟಿಗವಾಡ ನಿಂಗನಗೌಡ ಹೊಸಗೌಡ್ರ ನಿಂಗನಗೌಡ ಮರಿಲಿಂಗನಗೌಡರ ಈರನ ಗೌಡ ನಾಗನಗೌಡ್ರ ಸೋಮನಗೌಡ ಕೊರಡೂರ ನಿಂಗಪ್ಪ ಶಿವ ಬಸವಣ್ಣನವರ ನಾಗರಾಜ್ ದೊಡ್ಡಮನಿ, ಚಂದ್ರು ತಳವಾರ್ ಬಸವರಾಜ್ ಮಲ್ಲೂರ್ ಚಂದ್ರಶೇಖರಯ್ಯ ಗಡ್ಡದೇವರ ಮಠ ನಿಂಗನಗೌಡ ಮಣಕಟ್ಟಿ ಸೇರಿದಂತೆ ಗ್ರಾಮದ ಹಿರಿಯರು ನೂತನ ಅಧ್ಯಕ್ಷರನ್ನು ಸನ್ಮಾನಿಸಿದರು.

# ದೇಶಾಭಿಮಾನ ಮೂಡಿಸಬೇಕಿದೆ

**ಧಾರವಾಡ :** ದೇಶ ನಮಗೇನು ಮಾಡಿದೆ? ಎನ್ನುವ ಬದಲು ದೇಶಕ್ಕಾಗಿ ನಾವು ಏನು ಮಾಡಿದ್ದೇವೆ? ಎಂಬ ಬಗ್ಗೆ ನಮ್ಮನ್ನು ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಯುವಕರಿಗೆ ದೇಶದ ಕುರಿತು ಅಭಿಮಾನ ಮೂಡಿಸಬೇಕಾಗಿದೆ. ಯುವಕರು ಒಗ್ಗಟ್ಟಾಗಿ ದೇಶದ ಉನ್ನತಿಯಲ್ಲಿ ತೊಡಗಿದರೆ ದೇಶದ ಅಭಿವೃದ್ಧಿ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಜವಾಬ್ದಾರಿ ಹೊಂದಿರುವ ನಾಗರಿಕರಾದ ನಾವು ದೇಶಕ್ಕಾಗಿ ನಾಡು, ನುಡಿಗಾಗಿ ಎಲ್ಲರು



ಸೇರಿ ಜಾತಿಯತೆ ಮಾಡದೆ, ನಾವೆಲ್ಲರೂ ಕೆಲಸ ಮಾಡೋಣ ಎಂದರು. ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ 78ನೇ ಸ್ವಾತಂತ್ರ್ಯೋತ್ಸವ ನಿಮಿತ್ಯ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡುತ್ತಿದ್ದರು. ಆರಂಭದಲ್ಲಿ ಸಂಘದ ಸಂಸ್ಥಾಪಕರಾದ ರಾ. ಹ. ದೇಶಪಾಂಡೆ ಅವರ ಪುತ್ಥಳಿಗೆ ಶಂಕರ ಹಲಗತ್ತಿ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು. ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರ ಪುತ್ಥಳಿಗೆ ಕೋಶಾಧ್ಯಕ್ಷ ಸತೀಶ ತುರಮರಿ ಮಾಲಾರ್ಪಣೆ ಮಾಡಿ ಮಾತನಾಡಿದರು. ಈ ಸಂದರ್ಭದಲ್ಲಿ ಶಂಕರ ಕುಂಬಿ, ಗುರು ಹಿರೇಮಠ, ಡಾ. ಶ್ರೀಶೈಲ ಹುದ್ದಾರ, ಶಿವಾನಂದ ಭಾವಿಕಟ್ಟಿ, ಸುಜಾತ ಹಡಗಲಿ, ಬಿ.ಕೆ. ಹೊಂಗಲ, ನಾಗಭೂಷಣ ಹಿರೇಮಠ, ಆಶಾ ಸಯ್ಯದ ಹಾಗೂ ಸಂಘದ ಸಕಲ ಸಿಬ್ಬಂದಿ ವರ್ಗ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ನಾಡಿನ ಚರಿತ್ರೆಯ ಅರಿವು ನಮ್ಮಲ್ಲಿ ಅಭಿಮಾನ ಮೂಡಿಸುತ್ತದೆ: ಹಿಂದಿನ ಹೋರಾಟದ ಕಿಚ್ಚು ಮುಂದಿನ ದಾರಿಗೆ ಬೆಳಕಾಗುತ್ತದೆ

**ಧಾರವಾಡ :** ನಮ್ಮ ನಾಡಿನ ಇತಿಹಾಸ, ಅರಿವು ನಮ್ಮಲ್ಲಿ ಛಲ, ಅಭಿಮಾನ, ಹೆಮ್ಮೆ ಮೂಡಿಸುತ್ತದೆ. ಹಿಂದಿನ ಹೋರಾಟಗಳ ಕಿಚ್ಚು ನಮ್ಮ ಮುಂದಿನ ದಾರಿಗೆ ಬೆಳಕಾಗುತ್ತದೆ. ಬನ್ನಿ ಎಲ್ಲರೂ ಸೇರಿ ನಮ್ಮ ಐತಿಹಾಸಿಕತೆಯನ್ನು ಸ್ಮರಿಸಿ, ಸಂರಕ್ಷಿಸೋಣ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಇಂದು ಬೆಳಿಗ್ಗೆ ವಾಯ್. ಬಿ. ಅಣ್ಣಿಗೇರಿ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಆವರಣದಲ್ಲಿ ಜಿಲ್ಲಾಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಇತಿಹಾಸ ಉಪನ್ಯಾಸಕರ ಸಂಘ ಹಾಗೂ ಅಣ್ಣಿಗೇರಿ ಸೇವಾ ಟ್ರಸ್ಟ್‌ನ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ಅಖಂಡ ಧಾರವಾಡ ಜಿಲ್ಲೆಯ 77 ಸ್ವಾತಂತ್ರ್ಯ ಹೋರಾಟಗಾರರ ಕುರಿತು 77 ಉಪನ್ಯಾಸ ಮಾಲಿಕೆಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ, ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಸಕ್ತ ವರ್ಷದ ಸ್ವಾತಂತ್ರ್ಯೋತ್ಸವವನ್ನು ವಿಶೇಷವಾಗಿ ಆಚರಿಸಲಾಗಿದೆ. ಸ್ವಾತಂತ್ರ್ಯದ 77 ವರ್ಷಗಳನ್ನು 77 ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸ್ಮರಿಸಲಾಗಿದೆ. ಈ ಉಪನ್ಯಾಸ ಮಾಲಿಕೆಯಲ್ಲಿ ಜಿಲ್ಲೆಯ 26 ಸರಕಾರಿ, 24 ಅನುದಾನಿತ ಮತ್ತು 27 ಅನುದಾನರಹಿತ ಪದವಿಪೂರ್ವ ಮಹಾವಿದ್ಯಾಲಯಗಳು ಭಾಗವಹಿಸಿದ್ದವು. ಸುಮಾರು 46 ಜನ ಇತಿಹಾಸ ಉಪನ್ಯಾಸಕರು, ಪ್ರಾಧ್ಯಾಪಕರು, 15 ಜನ ಸಂಶೋಧಕರು ಹಾಗೂ 18 ಜನ ಹಿರಿಯ ಇತಿಹಾಸತಜ್ಞರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು, ಹೋರಾಟಗಳು ಮತ್ತು ಹೋರಾಟದ ಪ್ರೇರಕ ವ್ಯಕ್ತಿಗಳ ಕುರಿತು ಉಪನ್ಯಾಸ ನೀಡಿದ್ದಾರೆ. ಅಂದಾಜು 30 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಮತ್ತು 20 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಈ ಉಪನ್ಯಾಸಗಳ ಪ್ರಯೋಜನ ಪಡೆದಿದ್ದಾರೆ. ಉಪನ್ಯಾಸ ಮಾಲಿಕೆಯಲ್ಲಿ ಜಾನಪದ ಕಲಾ ತಂಡಗಳು ಭಾಗವಹಿಸಿ ಲಾವಣಿ, ಗೀಗೀ ಪದ, ಜಾನಪದ ಹಾಡುಗಳ ಮೂಲಕ ಸ್ವಾತಂತ್ರ್ಯದ ಹಿನ್ನಲೆಯನ್ನು, ಹಿರಿಯರ ತ್ಯಾಗ ಬಲಿದಾನಗಳನ್ನು ಕಥೆಯಂತೆ ಕಟ್ಟಿಕೊಟ್ಟಿದ್ದು, ಮಕ್ಕಳ ಮನ ಪರಿವರ್ತನೆಗೆ, ಅವರಲ್ಲಿ ರಾಷ್ಟ್ರಾಭಿಮಾನ ಮೂಡಿಸಲು ಸಹಾಯವಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದರು.

ದೇಶದ ಪ್ರಗತಿಯಾಗಬೇಕಾದರೆ ಮಕ್ಕಳಲ್ಲಿ ದೇಶಾಭಿಮಾನ ಹಾಗೂ ದೇಶದ ಭವ್ಯ ಭವಿಷ್ಯ ಉಜ್ವಲಿಸಲೆಬೇಕು.

ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಗೈದ ಇತಿಹಾಸದ ರಾಷ್ಟ್ರ ನಾಯಕರನ್ನು ಸ್ಮರಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಒಂದು ದೇಶದ ಬೆಳವಣಿಗೆಗೆ ಅದರ ಹಿಂದಿನ ಇತಿಹಾಸವೇ ಕಾರಣವಾಗಿರುತ್ತದೆ. ಇಂತಹ ಇತಿಹಾಸದಲ್ಲಿ ಎಷ್ಟು ಜನ ಹೋರಾಟಗಾರರು ತಮ್ಮ ಪ್ರಾಣಬಲಿದಾನವನ್ನು ನೀಡಿದ್ದಾರೆ ಎಂಬುವುದನ್ನು ಸಾರ್ವಜನಿಕರು ಅರ್ಥೈಸಿಕೊಳ್ಳಬೇಕು. ಇಂದಿನ ಪೀಳಿಗೆ ನಮ್ಮ ದೇಶದ ಸಮಗ್ರ ಇತಿಹಾಸ, ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ತಿಳಿದುಕೊಳ್ಳುವುದು ಅಗತ್ಯವಾಗಿದೆ ಎಂದು ಅವರು ತಿಳಿಸಿದರು.

ನಮ್ಮ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ, ಇತಹಾಸದ ಬಗ್ಗೆ ಪ್ರತಿಯೊಬ್ಬ ಧಾರವಾಡಿಗನೂ ತಿಳಿದುಕೊಳ್ಳಬೇಕು. ದೇಶದ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ದೇಶಕ್ಕಾಗಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಇತಿಹಾಸ ಉಪನ್ಯಾಸಕ ಸಂಘದ ಅಧ್ಯಕ್ಷ ಉದಯ ನಾಯಕ ಅವರು ಮಾತನಾಡಿ, ವಿದ್ಯಾರ್ಥಿಗಳು ಓದನ್ನು ತಮ್ಮ ಬದುಕಾಗಿ ಬದಲಿಸಿಕೊಳ್ಳಬೇಕು. ತಮ್ಮ ವಿದ್ಯಾರ್ಥಿ ಜೀವನವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವಲ್ಲಿ ವಿದ್ಯಾರ್ಥಿಗಳಿಗೆ ಇದು ಮುಖ್ಯ ಘಟ್ಟವಾಗಿದೆ. ಇಂದಿನ ಮಕ್ಕಳು ವ್ಯಕ್ತಿಗಳ ದೇಶದ ಇತಿಹಾಸದ ಬಗ್ಗೆ ತಿಳಿದುಕೊಳ್ಳಬೇಕು. ಬ್ರಿಟಿಷರು ತಮ್ಮ ಅಧಿಕಾರದ ಸಂದರ್ಭದಲ್ಲಿ ಭಾರತದ ನಾಗರಿಕರನ್ನು ಗುಲಾಮರನ್ನಾಗಿ ನಡೆಸಿಕೊಂಡ ರೀತಿ ಅತ್ಯಂತ ಕಠಿಣವಾಗಿತ್ತು. ಆದರೆ ಅದೇ ಸಮಯದಲ್ಲಿ ಗಾಂಧಿಜಿಯವರ ಉಪವಾಸ, ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹದಂತಹ ಚಳುವಳಿಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಟ್ಟರು ಎಂದು ಅವರು ತಿಳಿಸಿದರು.

ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ. ಪಿ. ಸುರೇಶ ಅವರು ಶೈಕ್ಷಣಿಕ ಸುಧಾರಣೆಯ ಕುರಿತು ಮಾತನಾಡಿದರು. ಇತಿಹಾಸ ಉಪನ್ಯಾಸಕರ ಸಂಘದ ಉಪಾಧ್ಯಕ್ಷ ಪ್ರಕಾಶ ಸುಣಗಾರ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಂಸ್ಕೃತಿಕ ಕಾರ್ಯಾಧ್ಯಕ್ಷ ಪ್ರೊ. ಬಸವರಾಜ ಉಡಿಕೇರಿ ಅವರು ಸ್ವಾಗತಿಸಿ, ಅತಿಥಿ ಪರಿಚಯ ಮಾಡಿದರು. ಪ್ರಾಚಾರ್ಯರಾದ ಮಹಾಬಳೇಶ್ವರಯ್ಯಾ ಸಿ.ಕೆಂಭಾವಿಮಠ ಅವರು ವಂದಿಸಿದರು. ಕಾರ್ಯಕ್ರಮದಲ್ಲಿ ಡಾ.ರಾಮು ಮೂಲಗಿ, ವಿಶ್ವೇಶ್ವರಿ ಬಸಲಿಂಗಯ್ಯ ಹಿರೇಮಠ ಹಾಗೂ ತಂಡದವರಿಂದ, ವಿದ್ಯಾರ್ಥಿಗಳಿಂದ ದೇಶಭಕ್ತಿ ಗೀತೆಗಳನ್ನು ಹಾಡಲಾಯಿತು. ಕುಮಾರಿ ಸೃಷ್ಠಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಪ್ರೊ. ಮಲ್ಲಿಕಾರ್ಜುನ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು.

# ಜಾತಿ, ಪಕ್ಷ ಬಿಡಿ, ದೇಶ ಶ್ರೀಮಂತಗೊಳಿಸುವ ಪಣ ತೊಡಿ

**ತೇರದಾಳ :** ಬ್ರಿಟ್ರಿಷರ ಕಪಿಮುಷ್ಠಿಯಿಂದ ಭಾರತ ದೇಶಕ್ಕೆ ಸ್ವಾತಂತ್ರ್ಯ ಅನ್ನುವುದು ಸುಮ್ಮನೆ ಬಂದಿಲ್ಲ. ಅದಕ್ಕಾಗಿ ಅವಿರತ ಹೋರಾಟ, ತ್ಯಾಗ, ಬಲಿದಾನ ಎಲ್ಲವೂ ನಡೆದಿದೆ. ದೇಶದ ಸ್ವಾತಂತ್ರ್ಯಗೋಸ್ಕರ ನಡೆದ ಹೋರಾಟ ಸಾರ್ಥಕಗೊಳ್ಳಬೇಕಾದರೆ ನಾವು ಜಾತಿಯತೆ, ಪಕ್ಷ, ಸ್ವಾರ್ಥ ಬಿಟ್ಟು ದೇಶವನ್ನು ಶ್ರೀಮಂತಗೊಳಿಸುವ ದೃಢ ಸಂಕಲ್ಪ ಮಾಡಬೇಕೆಂದು ಶಾಸಕ ಸಿದ್ದು ಸವದಿ ಹೇಳಿದುರ.



ಇಲ್ಲಿನ ಮಹಾತ್ಮ ಗಾಂಧೀಜಿ ಕ್ರೀಡಾಂಗಣದಲ್ಲಿ 78ನೇ ಸ್ವಾತಂತ್ರ್ಯೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶದ ಸಮೃದ್ಧಿಗಾಗಿ ಯುವಶಕ್ತಿ ಸನ್ನದ್ಧರಾಗಬೇಕಿದೆ. ಆ ದಿಸೆಯಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವ ಅಗತ್ಯ ಇದೆ ಎಂದು ಹೇಳಿದರು. ತಹಸೀಲ್ದಾರ್ ವಿಜಯಕುಮಾರ ಕಡಕೋಳ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಪ್ರಾಥಮಿಕ ವಿಭಾಗದ ಮಕ್ಕಳಿಂದ ವೇಷಭೂಷಣ, ಪ್ರೌಢ ವಿಭಾಗದ ವಿದ್ಯಾರ್ಥಿಗಳಿಂದ ಸಮೂಹ ನೃತ್ಯ, ಪರೇಡ್ ಸೇರಿದಂತೆ ಹಲವು ದೇಶಭಕ್ತಿ ಕಾರ್ಯಕ್ರಮಗಳು ಜರುಗಿದವು. ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಯೋಧರು, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಉಪತಹಸೀಲ್ದಾರ್ ಶ್ರೀಕಾಂತ ಮಾಯನ್ನವರ, ಮುಖ್ಯಾಧಿಕಾರಿ ಆನಂದ ಕೆಸರಗೊಪ್ಪ, ಉಪನೊಂದಣಾಧಿಕಾರಿ ಎಸ್.ಪಿ. ಮುತ್ತಪ್ಪಗೋಳ, ಕೃಷಿ ಅಧಿಕಾರಿ ಎಸ್.ಎಂ. ಬಿರಾದಾರ, ಪಿಎಸ್ಐ ಅಪ್ಪಣ್ಣ ಐಗಳಿ, ಕಂದಾಯ ನಿರೀಕ್ಷಕ ಪಿ.ಆರ್. ಮಠಪತಿ, ಮಾಜಿ ಸೈನಿಕ ಸಂಜಯ ಬಾನೆ, ಆನಂದ ನಡುವಿನಕೇರಿ, ಶಿಕ್ಷಣ ಇಲಾಖೆಯ ಬಿ.ಎಂ. ಹಳೇಮನಿ, ಅನಂತ ಮುಧೋಳ, ಮಹೇಶ ಸೋರಗಾಂವಿ, ಮಲ್ಲಿಕಾರ್ಜುನ ಬಿರಾದಾರಪಾಟೀಲ, ರೇವಣಸಿದ್ದ ಕಮತೆ ಸೇರಿದಂತೆ ಜನಪ್ರತಿನಿಧಿಗಳು, ಮುಖಂಡರು ಇದ್ದರು.

# ಸ್ವಾತಂತ್ರ್ಯ ಸೇನಾನಿಗಳ ಪರಿಚಯ: ಮುಂದಿನ ಪೀಳಿಗೆಗೆ ಅಗತ್ಯ

**ಬೆಂಗಳೂರು :** ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ನಾಯಕರು ಮತ್ತು ಯೋಧರ ಕುರಿತಂತೆ ಮುಂದಿನ ಪೀಳಿಗೆಗೆ ಅರಿವು ಮೂಡಿಸುವ ಕೆಲಸ ಆಗಬೇಕಿದೆ ಎಂದು ಕಾರವಾರ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕೆಎಸ್ಎಂಸಿಎ ಅಧ್ಯಕ್ಷರೂ ಆದ ಶ್ರೀ ಸತೀಶ ಕೃಷ್ಣ ಸೈಲ್ ತಿಳಿಸಿದರು.



ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಯಲ್ಲಿ ನಡೆದ 78ನೇ ಸ್ವಾತಂತ್ರ್ಯದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಎರಡು ಶತಮಾನಗಳಿಗೂ ಹೆಚ್ಚು ಕಾಲ ಬ್ರಿಟೀಷರ ದಬ್ಬಾಳಿಕೆಗೆ ಭಾರತ ನಲುಗಿ ಹೋಗಿತ್ತು. ರಾಷ್ಟ್ರಪಿತ ಮಹಾತ್ಮಾಗಾಂಧಿ ರವರ ನೇತೃತ್ವದಲ್ಲಿ ಅಸಂಖ್ಯಾತ ನಾಯಕರು ಮತ್ತು ಯೋಧರು ಮಾಡಿದ ತ್ಯಾಗ ಮತ್ತು ಬಲಿದಾನದಿಂದಾಗಿ ನಮಗೆ ಸ್ವಾತಂತ್ರ್ಯ ದೊರಕಿದೆ. ಈ ಕುರಿತಂತೆ ಮುಂದಿನ ಪೀಳಿಗೆಗೆ ಅರಿವು ಮೂಡಿಸುವ ಕೆಲಸ ಆಗಬೇಕಿದೆ. ಅದೇರೀತಿ ಭಾರತದ ಸಂವಿಧಾನದ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ ಚಿಂತನೆಗಳ ಕುರಿತಂತೆಯೂ ಅರಿವು ಮೂಡಿಸಬೇಕಿದೆ ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮೊಹಮ್ಮದ್ ಅತೀಕುಲ್ಲಾ ಶರೀಫ್ ರವರು ಮಾತನಾಡಿ ಭಾರತವು ಸಾವಿರಾರು ವರ್ಷಗಳಿಂದಲೂ ಸಾಂಸ್ಕೃತಿಕ ಹಿರಿಮೆಗೆ ಪ್ರಸಿದ್ಧವಾಗಿದೆ. ಇಡೀ ವಿಶ್ವದಲ್ಲಿಯೇ ಭಾರತದ ಸಂಸ್ಕೃತಿಗೆ ಅಮೂಯಿಲ್ಯ ಸ್ಥಾನ ದೊರೆತಿದೆ.

ಇಂಥಹ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾನ್ ಚೇತನರು ನಡೆದುಬಂದ ಹಾದಿಯ ಕುರಿತಂತೆ ಮತ್ತು ಅವರ ತತ್ವಾದರ್ಶಗಳನ್ನು ನಾವು ಅನುಸರಿಸುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಸಂಸ್ಥೆಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಪಿ.ಎಸ್. ನಂದೀಶ ಮತ್ತು ಇತರೆ ಅಧಿಕಾರಿಗಳು ಹಾಗು ಸಿಬ್ಬಂದಿ ಭಾಗವಹಿಸಿದ್ದರು.



**ಮೂಡಲಗಿ:** ನವದೆಹಲಿಯ ಐತಿಹಾಸಿಕ ಕೆಂಪು ಕೋಟೆಯ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರು 78ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ನೇರವೆರಿಸಿದ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಭಾಗವಹಿಸಿದ್ದರು.

# ಕಲ್ಲೋಳಿ ಪಟ್ಟಣ ಪಂಚಾಯಿತಿಗೆ ರಮೇಶ ನಾಮ ನಿರ್ದೇಶಕ



**ಮೂಡಲಗಿ :** ಕಲ್ಲೋಳಿಯ ಪಟ್ಟಣ ಪಂಚಾಯಿತಿಗೆ ನಾಮ ನಿರ್ದೇಶಕರಾಗಿ ರಮೇಶ ಈರಪ್ಪ ಬೆಳಕೂಡ ಆಯ್ಕೆಯಾಗಿದ್ದಾರೆ, ಸರ್ಕಾರ ಆದೇಶದಂತೆ ರಮೇಶ ಈರಪ್ಪ ಬೆಳಕೂಡ ಬಾಳಪ್ಪ ಸತ್ಯಪ್ಪಾ ಪಾಲಕಿ, ದುರ್ಗಪ್ಪ ಶೆಟ್ಟಪ್ಪ ಅಕ್ಕೆನ್ನವರ ಮೂವರು ಪ.ಪಂ ಆಯ್ಕೆಯಾಗಿದ್ದಾರೆ ಆದೇಶದಲ್ಲಿ ತಿಳಿಸಲಾಗಿದೆ, ಕಲ್ಲೋಳಿಯ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ರಮೇಶ ಈರಪ್ಪ ಬೆಳಕೂಡ ಇವರನ್ನು ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಶಿಶುಕ್ಷು ತರಬೇತಿಗೆ ಐಟಿಐ ವಿದ್ಯಾರ್ಥಿಗಳ ಆಯ್ಕೆ: ಆ.23ರಂದು ನೇರ ಸಂದರ್ಶನ

**ವಿಜಯಪುರ :** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪು ವಿಭಾಗದಿಂದ ಶಿಶುಕ್ಷು ತರಬೇತಿಗಾಗಿ ಆಯ್ಕೆ ಮಾಡಿಕೊಳ್ಳಲು ಐಟಿಐ ವಿದ್ಯಾರ್ಹತೆಯನ್ನು ಹೊಂದಿದ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಆ.23 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ಕಚೇರಿ, ಅಥಣಿ ರಸ್ತೆ ವಿಜಯಪುರದಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ಐಟಿಐನಲ್ಲಿ ಎಲೆಕ್ಟ್ರಿಷಿಯನ್, ಮೈಕ್ಯಾನಿಕ್, ಡಿಸೆಲ್ ಮೆಕ್ಯಾನಿಕ್, ಮೋಟಾರ ವೆಹಿಕಲ್, ಫಿಟರ್, ಪೇಂಟರ್ ಹಾಗೂ ವೆಲ್ಡರ್ ವೃತ್ತಿಯಲ್ಲಿ ಉತ್ತೀರ್ಣರಾದ 60 ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು www.apprentice-shipindia.gov.in ಪೋರ್ಟಲ್‌ನಲ್ಲಿ ಕ್ಯಾಂಡಿಡೇಟ್ ರಜಿಸ್ಟ್ರೇಶನ್ ನಲ್ಲಿ ವಿವರವಾದ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ನೊಂದಣಿಯೊಂದಿಗೆ ಅರ್ಜಿ ಸಲ್ಲಿಸಿ, ಸಲ್ಲಿಸಿದ ಅರ್ಜಿ ಹಾಗೂ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಮೊ: 7760992256, 9606908862 ಸಂಖ್ಯೆಗೆ ಸಂಪರ್ಕಿಸುವಂತೆ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತಾಂಬೆ ಗುಣಗಾನ




ಭಾರತ ದಿವ್ಯ ಭಾರತ
ಭವ್ಯ ಭಾರತ ನವ್ಯ ಭಾರತ ॥
ವಿಶ್ವಕೆ ಶಾಂತಿ ಮಂತ್ರ
ಬೋಧಿಸಿದ ಭಾರತ
ಶಾಂತಿ ನಿಲಯ ಭಾರತ ॥

ತಾಯ್ ನಿನ್ನ ಮಡಿಲಲ್ಲಿ
ಶಾಂತಿ ಸೌಖ್ಯ ತುಂಬಿದೆ
ಮಾತೆ ನಿನ್ನಡಿಯಲ್ಲಿ
ಪುಷ್ಪ ರಾಶಿ ಅರಳಿದೆ
ಕ್ಷಣ ಕ್ಷಣವು ದಿನ ದಿನವೂ
ನಿನ್ನ ಗಾನ ಮೊಳಗಿದೆ ॥

ಗಂಗೆ ತುಂಗೆ ಯಮುನೆ
ಸಿಂಧೂ ಕಾವೇರಿ ಕೃಷ್ಣೆ
ಜಲತೀರ್ಥ ಹರಿದು ಬಂದು
ಜನಮಾನಸ ಸಲುಹಿವೆ
ಪ್ರತಿಕ್ಷಣವು ಅನುದಿನವು
ಭಾರತ ಗುಡಿ ಬೆಳಗಿದೆ ॥

ಸಂತ ಶರಣರ ದಿವ್ಯಾತ್ಮರ
ನಡೆದಾಡಿದ ಪಾವನ ಕ್ಷೇತ್ರ
ನಮ್ಮ ಭಾರತ ಭವ್ಯ ಭಾರತ
ವೀರ ಶೂರ ಧೈರ್ಯ ತುಂಬಿದ
ದೇಶಭಕ್ತರುದಿಸಿದ ಭಾರತ
ಇದುವೇ ನಮ್ಮ ಭವ್ಯ ಭಾರತ ॥

ವೀರಯೋಧರಿಗೆ ಶಕ್ತಿ ತುಂಬಲಿ
ದುಷ್ಟ ವೈರಿಗಳೆಲ್ಲರ ಸದ್ದಡಗಲಿ
ಭಾರತಾಂಬೆ ಗುಣಗಾನ
ಮೊಳಗಲಿ
ಮಂತ್ರಘೋಷ ಪಠಿಸಲಿ
ವಿಶ್ವದೆಲ್ಲೆಡೆ ಕೀರ್ತಿ ಬೆಳಗಲಿ
ಭರತ ಮಾತೆಗೆ ಜಯವಾಗಲಿ

**ರಚನೆ : ಮ.ಕೃ.ಮೇಗಾಡಿ,**
**ಅಧ್ಯಕ್ಷರು,**
**ಕಸಾಪ ತಾಲೂಕಾ ಘಟಕ**
**ರಬಕವಿ-ಬನಹಟ್ಟಿ**
**ಮೊ. : 9844088133**

# ವರ ಮಹಾಲಕ್ಷ್ಮಿ



ಕರವ ಮುಗಿದು ಬೇಡುವೆ
ಹರಸು ಸಿರಿಲಕುಮಿ
ಬರಿದಾದ ಬಾಳಿಗೆ ಭಾಗ್ಯ
ತೋರು ವರಲಕುಮಿ॥

ತರ ತರದ ಹೂವನಿಟ್ಟು
ತಾಯಿ ಸಿಂಗರಿಸುವೆ
ಅರಿಶಿಣ ಕುಂಕುಮವಿಟ್ಟು
ಭಕ್ತಿಯಲಿ ನಮಿಸುವೆ॥

ನವಿರಾದ ಸೀರೆಯುಡಿಸಿ
ಅಲಂಕಾರ ಮಾಡುವೆ
ಸಿಹಿ ತಿನಿಸು ನೈವೇದ್ಯಗೈದು
ತುಪ್ಪದಾರತಿ ಬೆಳಗುವೆ॥

ಭಯ ಭಕುತಿಯಲಿ ಬಾಗಿಣ
ನೀಡಿ ಆರಾಧಿಸುವೆ
ಜಯ ಜಯ ದೇವಿಯೆಂದು
ನಾಮವ ಜಪಿಸುವೆ॥

ಸಿರಿಯ ದೇವಿಯೇ ಸಹಸ್ರ
ಅರ್ಚನೆಯ ಸ್ವೀಕರಿಸು
ಕರುಣೆಯಿಂದಲೇ ಜಗದ
ಕಷ್ಟವನು ನೀಗಿಸು॥

ಶರಣು ಬಂದೆನು ಲಕುಮಿ
ಬಾಳು ಹಸನಗೊಳಿಸು
ಪರಿಪರಿಯಲಿ ಪೂಜಿಸುವೆ
ನಿತ್ಯವೂ ಅವತರಿಸು॥

**– ಲತಾ ಕೆ.ಎಸ್. ಹೆಗಡೆ**
**ಬೆಂಗಳೂರು.**

## ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪೊಲೀಸರಿಂದ ಸನ್ಮಾನ



**ತೇರದಾಳ :** ದ್ವಿತೀಯ ಪಿಯುಸಿಯಲ್ಲಿ ಸಾಧನೆಗೈದ ಇಲ್ಲಿನ ಜೆವಿ ಮಂಡಳದ ಸ್ವತಂತ್ರ ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯೋತ್ಸವ ನಿಮಿತ್ತ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಸನ್ಮಾನಿಸಿ ಪ್ರೋತ್ಸಾಹ ಹಣ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಠಾಣಾಧಿಕಾರಿ ಅಪ್ಪಣ್ಣೆಗಳಿ, ಬನಹಟ್ಟಿ ಪಿಎಸ್ಐ ವಿಜಯ ಕಾಂಬಳೆ, ಸಾಧನೆ ಮಾಡುತ್ತೇನೆ ಎಂದು ಹೇಳಿ ಕುಳಿತರೆ ಸಾಲದು. ಅದಕ್ಕೆ ಪ್ರತಿಯಾಗಿ ನಿರಂತರ ಶ್ರಮ ಕೂಡ ಇರಬೇಕು.

ಬರೀ ಸಾಧಕರ ಹೆಸರಗಳನ್ನು ಹೇಳದೆ ನಾವು ಕೂಡ ಸಾಧಕರಾಗಬೇಕೆನ್ನುವ ಛಲ ಹೊಂದಿದಾಗ ಮಾತ್ರ ಬದುಕಿನಲ್ಲಿ ಯಶಸ್ಸು ಕಾಣಲು ಸಾಧ್ಯ. ಆ ದಿಸೆಯಲ್ಲಿ ಪಿಯು ವಿಭಾಗದಲ್ಲಿ ಸಾಧಿಸಿದ ನಿಮ್ಮ ಶ್ರಮ ಮೆಚ್ಚುವಂತದ್ದು ಎಂದು ಅಭಿನಂದಿಸಿದರು. ಕಲಾ ವಿಭಾಗದಲ್ಲಿ ರಾಜ್ಯಕ್ಕೆ ಏಳನೇ ಹಾಗೂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಐಶ್ವರ್ಯ ಕೌಜಲಗಿ, ವಾಣಿಜ್ಯ ವಿಭಾಗದಲ್ಲಿ ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದಿರುವ ಅಕ್ಷತಾ ಸಾರಾಪುರ, ಮಂಗಳಾ ಪಠಾಣಿ ಅವರನ್ನು ಸನ್ಮಾನಿಸಲಾಯಿತು.

ಕಾಲೇಜಿನ ಪ್ರಾಚಾರ್ಯ ಸಂತೋಷ ಕುಳ್ಳಿ, ಅಶೋಕ ಸವದಿ, ರಮೇಶ ಪಾಟೀಲ ಹಾಗೂ ಕಾಲೇಜಿನ ಸಿಬ್ಬಂದಿ ಇದ್ದರು.

## ಸಾಧನೆಯ ಹಾದಿ ಸುಲಭವಲ್ಲ: ಉಪನ್ಯಾಸಕಿ ವಿಮಲಾ

**ಜಮಖಂಡಿ :** ಸಾಧನೆಯ ಹಾದಿ ಸುಲಭವಲ್ಲ. ಆತ್ಮವಿಶ್ವಾಸ, ಸದೃಢವಾದ ಸಂಕಲ್ಪ, ಸತತ ಪ್ರಯತ್ನ, ಕಳೆಗುಂದದ ಉತ್ಸಾಹ, ಕಠಿಣ ಪರಿಶ್ರಮ, ತ್ಯಾಗದ ಮನೋಭಾವ, ನಿಸ್ವಾರ್ಥ ಸೇವೆ ಇವೆಲ್ಲವುಗಳ ಆಗರವೆ ಸಾಧನೆ ಎಂದು ಸರ್ಕಾರಿ ಪಿ.ಬಿ.ಪ.ಪೂ ಕಾಲೇಜಿನ ಉಪನ್ಯಾಸಕಿ ವಿಮಲಾ ಬೊಮ್ಮನಹಳ್ಳಿ ಹೇಳಿದರು.

ಶ್ರೀವೀರೇಶ್ವರ ಪ್ರಕಾಶನ, ಸಾಹಿತ್ಯ ಸೌರಭ ವೇದಿಕೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಆಶ್ರಯದಲ್ಲಿ 78ನೇ ಸ್ವಾತಂತ್ರ್ಯೋತ್ಸವ ನಿಮಿತ್ತ ಇಲ್ಲಿನ ಸಾಹಿತ್ಯ ಸೌರಭ ವೇದಿಕೆಯಲ್ಲಿ ಗುರುವಾರ ಸಂಜೆ ಏರ್ಪಡಿಸಿದ್ದ ವಿವಿಧ ಸಾಧಕರ ಅಭಿನಂದನಾ ಸಮಾರಂಭದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.



ಸಾಧನೆಎನ್ನುವುದುಒಂದುದಿನದ ಕಾರ್ಯವಲ್ಲ. ಎಲೆಮರೆಯ ಕಾಯಿಯಂತೆ ಹಾಗೂ ತನ್ನನ್ನೆ ಸುಟ್ಟುಕೊಂಡುಇತರರಿಗೆಬೆಳಕನ್ನು ನೀಡುವ ಮೇಣಬತ್ತಿಯಂತೆ ಸಮಾಜಮುಖಿ ಕಾರ್ಯದಲ್ಲಿ ತೊಡಗಿರುವವಿಶೇಷಸಾಧಕರನ್ನು ಗುರುತಿಸಿ ಗೌರವಿಸುವುದು ಸಮಾಜದ ಜವಾಬ್ದಾರಿಯಾಗಿದೆ ಎಂದರು. ನಿವೃತ್ತ ಪ್ರಾಚಾರ್ಯ ಡಾ.ಸಂಗಮೇಶ ಮಟೋಳಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಧಕರನ್ನು ಗುರುತಿಸಿ ಗೌರವಿಸದವರು ಯಾರೂ ದೊಡ್ಡವರೆನಿಸಿಕೊಳ್ಳುವುದಿಲ್ಲ. ತ್ಯಾಗ ಮತ್ತು ಸೇವೆ ಸಾಧಕರ ಅವಳಿ ಆದರ್ಶಗಳಾಗಿವೆ. ಸಾಧಕರು ಸತ್ತ ಮೇಲೆ ಮುಕ್ತರಾಗುವುದಿಲ್ಲ. ಬದಲಾಗಿಜೀವಂತಇರುವಾಗಲೇ ಮುಕ್ತರಾಗಿರುತ್ತಾರೆ ಎಂದರು.

ಶರಣಸಾಹಿತ್ಯಪರಿಷತ್ತಿನತಾಲ್ಲೂಕು ಘಟಕದ ಉಪಾಧ್ಯಕ್ಷ ಚಿತ್ತರಂಜನ ನಾಂದ್ರೇಕರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಮಾತನಾಡಿದರು. ಸಾಹಿತಿ ರುದ್ರಗೌಡ ಪಾಟೀಲ ಅವರು ವಿರಚಿತ 'ಅವಲೋಕನ' ಕೃತಿಯನ್ನು ಇದೇ ಸಂದರ್ಭದಲ್ಲಿ ಲೋಕಾರ್ಪಣೆ ಮಾಡಲಾಯಿತು.

ವಿಶೇಷ ಸಾಧಕರಾದ ಹಿರಿಯ ಪತ್ರಕರ್ತ ಡಾ.ಟಿ.ಪಿ. ಗಿರಡ್ಡಿ, ಸಾಹಿತಿ ರುದ್ರಗೌಡ ಪಾಟೀಲ, ಸಾಹಿತಿ ಬಾಹುಬಲಿ ಬಿರಾದಾರಪಾಟೀಲ, ಪ್ರಗತಿಪರ ರೈತ ಸೋಮನಾಥ ಪಾಟೀಲ, ಸಾಹಿತಿ ಪ್ರವೀಣ ಕುಲಕರ್ಣಿ, ಕೃಷಿ ಲೇಖಕ ಬಸವರಾಜ ಗಿರಗಾಂವಿ, ಶುಶ್ರೂಷಕ ಜೆ.ಡಿ. ಧನ್ನೂರ, ಸಾಹಿತಿ ಡಾ.ಶ್ರೀದೇವಿ ಸುವರ್ಣಖಂಡಿ ಅವರುಗಳನ್ನು ಪ್ರಮಾಣ ಪತ್ರ, ಫಲಪುಷ್ಪ ನೀಡಿ ಸನ್ಮಾನಿಸಲಾಯಿತು.

ಕಲಾವಿದ ಬಿ.ಎನ್. ಅಸ್ಕಿ ಪ್ರಾರ್ಥನೆ ಗೀತೆ ಹಾಡಿದರು. ಪ್ರೊ.ರಾಜಶೇಖರ ಹೊಸಟ್ಟಿ ಸ್ವಾಗತಿಸಿದರು. ಶಿಕ್ಷಕ ರಮೇಶ ದೇಸಾಯಿ, ಉಪನ್ಯಾಸಕ ಡಾ.ಲಿಂಗಾನಂದ ಗವಿಮಠ ನಿರೂಪಿಸಿದರು. ನಿವೃತ್ತ ಶಿಕ್ಷಕ ಸುರೇಂದ್ರ ಯಲ್ಲಟ್ಟಿ ವಂದಿಸಿದರು.



ಬನಶಂಕರಿದೇವಿಗೆ ವಿಶೇಷ ಅಲಂಕಾರ

ಪೋಟೋ: ಪಟ್ಟಣದ ಶತಮಾನ ಕಂಡ ಐತಿಹಾಸಿಕ ಬನಶಂಕರಿ ದೇವಸ್ಥಾನದಲ್ಲಿ ವರಮಹಾಲಕ್ಷ್ಮೀ ಹಬ್ಬ ಹಾಗೂ ಶ್ರಾವಣ ಶುಕ್ರವಾರದ ನಿಮಿತ್ಯ ದೇವಿಗೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಗಿತ್ತು. ಸಂಜೆ ಮಹಿಳೆಯರಿಂದ ದೇವಿಗೆ ದೀಪಾರಾಧನೆ ಕಾರ್ಯಕ್ರಮ ಜರುಗಿತು.



### ಬಂದಲಕ್ಷ್ಮೀದೇವಿಗೆ ವರಮಹಾಲಕ್ಷ್ಮೀ ಪೂಜೆ

ಮಹಾಲಿಂಗಪುರ: ವರಮಹಾಲಕ್ಷ್ಮೀ ಹಬ್ಬ ಹಾಗೂ ಶ್ರಾವಣ ಶುಕ್ರವಾರ ರನ್ನಬೆಳಗಲಿ ಪಟ್ಟಣದ ಐತಿಹಾಸಿಕ ಬಂದಲಕ್ಷ್ಮೀ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಗಿತ್ತು. ಮುಂಜಾನೆಯಿಂದ ಸಂಜೆವರೆಗೆ ಸಾವಿರಾರು ಭಕ್ತರು ದೇವಿಗೆ ಪೂಜೆ ಸಲ್ಲಿಸಿದರು.

## ಕಾಲೇಜು ನೂತನ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಚಾಲನೆ

**ಮಹಾಲಿಂಗಪುರ :** ಸಮೀಪದ ಕೆಸರಗೊಪ್ಪ ಗ್ರಾಮದ ಸರ್ಕಾರಿ ಪಪೂ ಕಾಲೇಜಿನ ನೂತನ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ತೇರದಾಳ ಶಾಸಕ ಸಿದ್ದು ಸವದಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು 2023–24ನೇ ಸಾಲಿನ ವಿವೇಕ ಯೋಜನೆಯ ಅಡಿಯಲ್ಲಿ ಮಂಜೂರಿಯಾದ ಅಂದಾಜು 50 ಲಕ್ಷ ಮೊತ್ತದ ಎರಡು ಕೊಠಡಿಗಳು ಮಂಜೂರಿಯಾಗಿವೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ದೇವಾಲಯ ಇದಾಗಿದ್ದರಿಂದ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು. ವರ್ಷದಿಂದ ವರ್ಷಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವದರಿಂದ ಈ ನೂತನ ಎರಡು ಕೊಠಡಿಗಳು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಸಹಕಾರಿಯಾಗಲಿವೆ ಎಂದರು.



ಈ ಸಂದರ್ಭದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯಿಂದ ಶಾಸಕ ಸಿದ್ದು ಸವದಿಯವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪಪೂ ಕಾಲೇಜಿನ ಪ್ರಾಚಾರ್ಯ ಜಿ.ಬಿ.ಸಜ್ಜನ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಸಪ್ಪ ಜಾಲಿಕಟ್ಟಿ, ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಗ್ರಾಪಂ ಅಧ್ಯಕ್ಷ ಸವಿತಾ ದೊಡಮನಿ, ಗ್ರಾಮದ ಮುಖಂಡರಾದ ಪರಪ್ಪ ಬ್ಯಾಕೂಡ, ಮಾರುತೆಪ್ಪ ತೇಜಪ್ಪಗೋಳ, ದುಂಡಪ್ಪ ಜಾಧವ, ಚನ್ನು ದೇಸಾಯಿ, ಭೀಮಪ್ಪ ಸಸಲಟ್ಟಿ, ಪರಪ್ಪ ಸತ್ತಿಗೇರಿ, ಮಾರುತಿ ಖರೋಶಿ,

ವಿಠ್ಠಲ ಢವಳೇಶ್ವರ, ವಿಠ್ಠಲ ಬನಾಜ, ಮಹಾದೇವ ಸಸಾಲಟ್ಟಿ, ಜ್ಯೋತೆಪ್ಪ ಕಪರಟ್ಟಿ, ಮಲ್ಲಿಕಾರ್ಜುನ ಢವಳೇಶ್ವರ, ವಿಠ್ಠಲ ಶಿರೋಳ, ಬಸಪ್ಪ ಹುದ್ದಾರ, ಸಿದ್ದು ತೇಜಪ್ಪಗೋಳ, ಮಹಾದೇವ ಜಗದಾಳ, ಸಿದ್ದು ಸತ್ತಿಗೇರಿ,

ಪಾಪು ಉಳ್ಳಾಗಡ್ಡಿ, ಬಸಪ್ಪ ಜಿಡ್ಡಿಮನಿ, ಮಲ್ಲಪ್ಪ ಢವಳೇಶ್ವರ, ಗೋಪಾಲ ಬ್ಯಾಕೂಡ, ಗುತ್ತಿಗೆದಾರ ಜನವಾಡ ಸೇರಿದಂತೆ ಹಲವರು ಇದ್ದರು.

## ಕಪ್ಪುಬಟ್ಟೆ ಧರಿಸಿ ಸೇವೆ ಸಲ್ಲಿಸಿದ ವೈದ್ಯರು, ಸರ್ಕಾರಕ್ಕೆ ಗುತ್ತಿಗೆ ನೌಕರರ ಒತ್ತಾಯ

## ಆರೋಗ್ಯ ನೌಕರರ ಖಾಯಂಗೊಳಿಸಲು ಆಗ್ರಹಿಸಿ ಮುಷ್ಕರ

**ಗುಳೇದಗುಡ್ಡ :** ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಒಳಗುತ್ತಿಗೆ ಆಧಾರದ ಮೇಲೆಕಾರ್ಯನಿರ್ವಹಿಸುತ್ತಿರುವ ವೈದ್ಯರು, ಪ್ರಯೋಗಾಲಯದ ಸಿಬ್ಬಂದಿ,ಆಪ್ತಸಮಾಲೋಚಕರು, ಶೂಶ್ರುಕರು ಸೇವೆ ಖಾಯಂ ಮಾಡಬೇಕೆಂದು ಆಗ್ರಹಿಸಿ ಕೈಗಳಿಗೆ ಕಪ್ಪು ಬಟ್ಟೆಕಟ್ಟಿಕೊಂಡು ಮುಷ್ಕರ ನಡೆಸಿದರು.



ಈ ಸಂದರ್ಭದಲ್ಲಿ ಒಳಗುತ್ತಿಗೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಕೆ.ಟಿ.ಗಾಜಿ ಮಾತನಾಡಿ, ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಎನ್‌ಹೆಚ್‌ಎಮ್ ಒಳಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಭರವಸೆನೀಡಿದ್ದರು.ಸದ್ಯಪೂರ್ಣ ಪ್ರಮಾಣದ ಬಹುಮತದೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಿದ್ದು, ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಒಳಗುತ್ತಿಗೆ ನೌಕರರ ಬೇಡಿಕೆಯನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಒತ್ತಾಯಿಸಿದರು.

ಜಿಲ್ಲೆಯಲ್ಲಿ 1075 ಜನ ವೈದ್ಯರು, ಪ್ರಯೋಗಾಲಯದ ಸಿಬ್ಬಂದಿ ಆಪ್ತ ಸಮಾಲೋಚಕರು, ಶೂಶ್ರುಕರು ಒಳಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತ ಬಂದಿದ್ದು, ನಮಗೆ ಸೇವಾ ಭದ್ರತೆ ಇಲ್ಲವಾಗಿದ್ದು, ಇದರಿಂದ ನಮಗೆ ಸಾಕಷ್ಟು ತೊಂದರೆಯಾಗಿದೆ. ರಾಜ್ಯದಲ್ಲಿ 28256 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಗುಳೇದಗುಡ್ಡದಲ್ಲಿ 15ಜನ ಸಿಬ್ಬಂದಿಗಳುಒಳಗುತ್ತಿಗೆಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ ಎಂದರು.

ಎನ್‌ಹೆಚ್‌ಎಮ್ ಒಳಗುತ್ತಿಗೆ ನೌಕರರ ಸಂಘದ ರಾಜ್ಯಮಟ್ಟದ ನಿಯೋಗವು ಅನೇಕ ಭಾರಿ ಮುಖ್ಯಮಂತ್ರಿಗಳನ್ನು, ಉಪಮುಖ್ಯಮಂತ್ರಿಗಳನ್ನು ಭೇಟಿ ಮಾಡಿ, ನೌಕರರನ್ನು ಖಾಯಂ ಮಾಡುವುದಕ್ಕೆ ಮನವಿ ಮಾಡಿಕೊಂಡಿದ್ದೇವೆ.

ಸುಮಾರು ವರ್ಷಗಳಿಂದ ನಮ್ಮ ಏಕೈಕ ಬೇಡಿಕೆ ಆಗಿರುವಂತಹ ಎನ್‌ಹೆಚ್‌ಎಮ್ ಒಳಗುತ್ತಿಗೆ ನೌಕರರನ್ನು ಖಾಯಂ ಮಾಡಬೇಕೆಂದು ಸಂಘದ ಜಿಲ್ಲಾಧ್ಯಕ್ಷ ಡಾ.ಕೆ.ಟಿ.ಗಾಜಿ, ಆಯುಷ್ಯವೈದ್ಯೆಡಾ.ಕವಿತಾ ಸಂಕ, ಆಪ್ತ ಸಮಾಲೋಚಕಿ ಜಯಶ್ರೀ ಕಳಸಾ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಹನಮಂತ ಅಪ್ಪನ್ನವರ, ಗಂಗಾಧರ ಹಣಗಿ, ತಭಿತಾ ಭೀರನೂರ, ಸವಿತಾ ಗಡೇದ, ಮಂಜುಳಾ ಚೌಡಾಪೂರ, ಲಕ್ಷ್ಮೀ ಹೆಬ್ಬಳ್ಳಿ, ಶಂಕ್ರಮ್ಮ ಕತ್ತಿಕೈ, ರಾಚಣ್ಣ ಪಟ್ಟಣದ, ಮಂಜುನಾಥ ಪದರಾ, ಶಕುಂತಲಾ ಹೊಸಮನಿ ಇದ್ದರು.

## ಗ್ರಂಥಪಾಲಕರ ದಿನಾಚರಣೆ: ಸಾರ್ವಜನಿಕ ಗ್ರಂಥಾಲಯಗಳು ಶ್ರೀ ಸಾಮಾನ್ಯನ ವಿಶ್ವವಿದ್ಯಾಲಗಳು



**ಕೊಪ್ಪಳ :** ಕೊಪ್ಪಳ ನಗರದ ಎನ್.ಜಿ.ಓ ಕಾಲೋನಿಯಲ್ಲಿರುವ ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿ ಡಾ.ಬಿ.ಆರ್.ಅಂಬೇಡ್ಕರ್ ರೀಡಿಂಗ್ ಸೆಂಟರನಲ್ಲಿ ಸೋಮವಾರದಂದು ಸರಳವಾಗಿ ಗ್ರಂಥಪಾಲಕರ ದಿನಾಚರಣೆಯನ್ನು ಆಚರಿಸಲಾಯಿತು.

ಭಾರತೀಯ ಗ್ರಂಥಾಲಯ ಪಿತಾಮಹ ಪದ್ಮಶ್ರೀ ಡಾ ಎಸ್.ಆರ್.ರಂಗನಾಥನ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.

ಮುಖ್ಯ ಗ್ರಂಥಾಲಯಾಧಿಕಾರಿ ಯಮನೂರಪ್ಪ ಅವರು ಮಾತನಾಡಿ, ಭಾರತೀಯ ಗ್ರಂಥಾಲಯ ಪಿತಾಮಹ ಪದ್ಮಶ್ರೀ ಡಾ ಎಸ್.ಆರ್.ರಂಗನಾಥನ್ ಅವರ ಜನ್ಮದಿನವನ್ನೇ ಗ್ರಂಥಪಾಲಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ರಂಗನಾಥನ್ ಅವರು ಗ್ರಂಥಾಲಯ ವಿಜ್ಞಾನ ಕ್ಷೇತ್ರಕ್ಕೆ ಪಂಚಸೂತ್ರಗಳು, ದ್ವಿಬಿಂದು ವರ್ಗೀಕರಣ ಸೇರಿದಂತೆ ಹಲವಾರು ಕೊಡುಗೆಗಳನ್ನು ನೀಡಿ–ದ್ದಾರೆ. ಅವರ ಸೇವೆ ಪರಗಣಿಸಿ ಭಾರತ ಸರ್ಕಾರ ಪದ್ಮಶ್ರೀ ನೀಡಿ ಗೌರವಿಸಿದೆ. ಆಗಸ್ಟ್ 12.1892 ರಲ್ಲಿ ಜನಿಸಿದ ಇವರು ಸೆಪ್ಟಂಬರ್ 27. 1972 ರಲ್ಲಿ ಕೊನೆಯುಸಿರೆಳೆದರು. ಸಾರ್ವಜನಿಕ ಗ್ರಂಥಾಲಯಗಳು ಶ್ರೀ ಸಾಮಾನ್ಯನ ವಿಶ್ವವಿದ್ಯಾಲಯಗಳು. ಸಾರ್ವಜನಿಕಗ್ರಂಥಾಲಯ ಇಲಾಖೆ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಿ ಎಂದರು.

ಮಲೆಗಳಲ್ಲಿ ಮಧುಮಗಳು, ಕಾನೂರು ಹೆಗ್ಗಡತಿ, ಭಾರತ ಸಿಂಧು ರಶ್ಮಿ, ಮೂಕಜ್ಜಿಯ ಕನಸುಗಳು ಮುಂತಾದ ಅನೇಕ ಪುಸ್ತಕಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು.

ಮುಖ್ಯಗ್ರಂಥಾಲಯಾಧಿಕಾರಿ ಕಛೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಾದ ನರಸಿಂಹಮೂರ್ತಿ, ಉಮಾ ಹಳ್ಯಾಳ, ಕೊಟ್ರಪ್ಪ ಬಿ, ವಿಜಯಲಕ್ಷ್ಮೀ ವಡ್ಡಟ್ಟಿ, ಕಾಶಿಬಾಯಿ, ಶರಣಪ್ಪ ವಡಿಗೇರಿ ಹಾಜರಿದ್ದರು. ನಾಗರಾಜನಾಯಕ ಡೊಳ್ಳಿನ ಕಾರ್ಯಕ್ರಮ ನಿರ್ವಹಿಸಿದರು.

ಗಣೇಶ ನಗರ ಶಾಖೆಯಲ್ಲಿ ಸಿಬ್ಬಂದಿ ವಿಜಯಲಕ್ಷ್ಮೀ ವಡ್ಡಟ್ಟಿ, ಕುಷ್ಟಗಿ ಶಾಖೆಯಲ್ಲಿ ಸಿಬ್ಬಂದಿ ಕಾಶಿಬಾಯಿ, ಶರಣಪ್ಪ ವಡಿಗೇರಿ ಹಾಗೂ ವಿವಿಧ ಶಾಖಾ ಗ್ರಂಥಾಲಯದಲ್ಲಿ ಓದುಗರೊಂದಿಗೆ ಗ್ರಂಥಪಾಲಕರ ದಿನಾಚರಣೆಯನ್ನು ಆಚರಿಸಲಾಯಿತು.

## ಪುರಸಭೆ ಸದಸ್ಯರು ಮತ್ತು ಅಧಿಕಾರಿಗಳಿಂದ ಡಾಂಬರೀಕರಣ ಕಾಮಗಾರಿಗೆ ತಡೆ

## ಡಿಸಿ ಆದೇಶವನ್ನು ಕಡೆಗಣಿಸಿದ ಗುತ್ತಿಗೆದಾರರು ಮತ್ತು ಲೋಕೋಪಯೋಗಿ ಅಧಿಕಾರಿಗಳು

**ಮಹಾಲಿಂಗಪುರ :** ಪಟ್ಟಣದ ಬಸವ ವೃತ್ತದಿಂದ ಢವಳೇಶ್ವರ ರಸ್ತೆವರೆಗಿನ ಡಬಲ್ ರಸ್ತೆಯ ಕಾಮಗಾರಿಯು ಪ್ರಾರಂಭವಾಗಿ ಎರಡುವರೆ ವರ್ಷಗಳೇ ಕಳೆದಿದೆ. ಆದರೆ ಇಂದಿಗೂ ಕಾಮಗಾರಿಯು ಪೂರ್ತಿಯಾಗದೇ ಅರ್ಧಕ್ಕೆ ಉಳಿದು ಟ್ರಾಫಿಕ್ ಸಮಸ್ಯೆಯಿಂದ ಸಾರ್ವಜನಿಕರು, ಬೈಕ್ ಸವಾರರು ಪರದಾಡುವಂತಾಗಿದೆ.

ರಸ್ತೆಯ ಇಕ್ಕೆಲಗಳಲ್ಲಿ ಚರಂಡಿ ಪುಟ್‌ಪಾತ್ ನಿರ್ಮಿಸದೇ ಡಾಂಬರೀಕರಣ ಪ್ರಾರಂಭಿಸಿರುವದನ್ನು ಖಂಡಿಸಿ, ಪುರಸಭೆಯ ಸದಸ್ಯರು ಮತ್ತು ಅಧಿಕಾರಿಗಳು ಡಾಂಬರೀಕರಣ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿದ ಘಟನೆಯು ಶುಕ್ರವಾರ ಮಧ್ಯಾಹ್ನ ನಡೆಯಿತು.

ಪುರಸಭೆ ಸದಸ್ಯರಾದ ಪ್ರಲ್ಹಾದ ಸಣ್ಣಕ್ಕಿ, ರವಿ ಜವಳಗಿ ಮಾತನಾಡಿ ರಬಕವಿ–ಜಾಂಬೋಟಿ ರಾಜ್ಯಹೆದ್ದಾರಿಯಲ್ಲಿ ಬವಸವೃತ್ತದಿಂದ ಢವಳೇಶ್ವರ ರಸ್ತೆಯ ದ್ವಾರ ಬಾಗಿಲುವರೆಗಿನ ಕೇವಲ 775 ಮೀಟರ್‌ನಷ್ಟಿರುವ ಕಾಮಗಾರಿಗೆ ಒರೊಬ್ಬರಿ 6 ಕೋಟಿ 25 ಲಕ್ಷ ಖರ್ಚು ಮಾಡಲಾಗಿದೆ. ಕಳೆದ ಎರಡು ವರ್ಷಗಳಿಂದ ಆಮೆಗತಿಯಯಲ್ಲಿದ್ದ ಕಾಮಗಾರಿಯನ್ನು ಗುತ್ತಿಗೆದಾರರು ಮನಬಂದಂತೆ ಅವೈಜ್ಞಾನಿಕವಾಗಿ ಮಾಡಿದ್ದಾರೆ. ಕಳೆದ



ತಿಂಗಳು ಪುರಸಭೆಯಿಂದ ರಸ್ತೆಯ ಪೂರ್ವಭಾಗದಲ್ಲಿನ ಅತಿಕ್ರಮಣ ಅಂಗಡಿಗಳನ್ನು ತೆರವುಗೊಳಿಸಿ ಚರಂಡಿ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ. ಅದರಂತೆ ಪಶ್ಚಿಮ ಭಾಗದಲ್ಲಿನ ಅಂಗಡಿಗಳನ್ನು ತೆರವುಗೊಳಿಸಿ, ಚರಂಡಿ ಪುಟಪಾತ್, ರಸ್ತೆಯ ಮಧ್ಯದಲ್ಲಿ ವಿಭಜಕ(ಡಿವೈಡರ್) ನಿರ್ಮಿಸಬೇಕು. ಅಲ್ಲಿಯವರೆಗೆ ಕಾಮಗಾರಿಯನ್ನು ನಿಲ್ಲಿಸಬೇಕು. ಇದು ಪಟ್ಟಣದ ಅಭಿವೃದ್ಧಿ ಮತ್ತು ಭವಿಷ್ಯದ ಟ್ರಾಫೀಕ್ ಸಮಸ್ಯೆಯ ನಿವಾರಣೆಗಾಗಿ ಉಭಯ ಪಕ್ಷಗಳ ಸದಸ್ಯರ ಒಗ್ಗಟ್ಟಿನ ಆಗ್ರಹವಾಗಿದೆ ಎಂದು ಗುತ್ತಿಗೆದಾರರು ಮತ್ತು ಲೋಕೋಪಯೋಗಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ಮಾತನಾಡಿ ಪುರಸಭೆಯ ಎರಡು ಪಕ್ಷಗಳ ಸದಸ್ಯರು ಒಗ್ಗಟ್ಟಾಗಿ ರಸ್ತೆ ಅಗಲೀಕರಣವಾಗಲಿ ಎಂಬ ಉದ್ದೇಶದಿಂದ ಪೂರ್ವಭಾಗದಲ್ಲಿನ ಆಸ್ತಿಗಳನ್ನು ಅಳತೆ ಮಾಡಿ, ಅತಿಕ್ರಮಣ ಜಾಗೆಗಳನ್ನು ತೆರವುಗೊಳಿಸಲಾಗಿದೆ. ಅದರಂತೆ ಪಶ್ಚಿಮ ಭಾಗದಲ್ಲಿನ ಆಸ್ತಿಗಳನ್ನು ಸರ್ವೆ ಮಾಡಲು ನಗರ ಭೂಮಾಪನ ಅಧಿಕಾರಿಗಳಿಗೆ ತಿಳಿಸಲಾಗಿದೆ. ಎರಡು ಭಾಗದಲ್ಲಿ ಚರಂಡಿ ನಿರ್ಮಾಣ ಮತ್ತು ಪುಟ್‌ಪಾತ್ ನಿರ್ಮಿಸಿದ ನಂತರವೇ ಡಾಂಬರೀಕರಣ ಮಾಡಲು ಸದಸ್ಯರು ಹೇಳಿದ್ದರು ಸಹ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಿದ ಕಾರಣ ಇಂದು ಸದಸ್ಯರೊಂದಿಗೆ ಬಂದು ಕಾಮಗಾರಿಯನ್ನು ನಿಲ್ಲಿಸಲು ತಿಳಿಸಿದ್ದೇವೆ ಎಂದರು.

ಪುರಸಭೆ ಸದಸ್ಯ ಬಸವರಾಜ ಚಮಕೇರಿ ಮಾತನಾಡಿ ಪಶ್ಚಿಮ ಭಾಗದಲ್ಲಿನ ಅತಿಕ್ರಮಣ ಅಂಗಡಿಗಳ ತೆರವು ನಂತರ ಚರಂಡಿ, ಪುಟ್‌ಪಾತ ನಿರ್ಮಿಸಿ, ಡಾಂಬರೀಕರಣ ಮಾಡಲು ಹೇಳಿ, ಗುರುವಾರವೇ ಲೋಕೋಪಯೋಗಿ ಅಧಿಕಾರಿಗಳಿಗೆ, ಡಿಸಿಯವರಿಗೆ ತಿಳಿಸಲಾಗಿದೆ. ಡಿಸಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಕಾಮಗಾರಿಯನ್ನು ನಿಲ್ಲಿಸಲು ತಿಳಿಸಿದ್ದಾರೆ.



78 ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ ಅಂಗವಾಗಿ ಲೋಕೋಪಯೋಗಿ ಇಲಾಖೆ ವಿಭಾಗ, ಉಪವಿಭಾಗಗಳು ಹಾಗೂ ಇಲಾಖಾ ಗುತ್ತಿಗೆದಾರರ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ರಕ್ತದಾನ ಹಾಗೂ ನೇತ್ರದಾನ ಶಿಬಿರಕ್ಕೆ ಜಿಲ್ಲಾಧಿಕಾರಿ ಜಾನಕಿ ಕೆ.ಎಮ್ ಚಾಲನೆ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ ಹಾಗೂ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜೀನಿಯರ್ ರಾಜಶೇಖರ ಕಡಿವಾಲ ಇದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State